## 10

# “ಮನುಷ್ಯನು ಏನನ್ನು ಬಿತ್ತುತ್ತಾನೋ”

## (2 ಸಮುವೇಲ 11-16; 18)

ಪ್ರಪಚಂದಲ್ಲಿ ನೇಯಲ್ಪಟ್ಟಂತ ನಿಯಮಾವಳಿಗಳಂತೆಯೇ, ಗಲಾತ್ಯ 6:7, 8ರಲ್ಲಿ ತೋರಿಸಲ್ಪಟ್ಟಿದೆ:

> ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು. ತನ್ನ ಶರೀರಭಾವವನ್ನು ಕುರಿತು ಬಿತ್ತುವವನು, ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮವನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯ ಜೀವವನ್ನು ಕೊಯ್ಯುವನು.

ನೀನು ಮಾಡುವಂತದ್ದನ್ನು ನಂಬು; ನೀನು ಬಿತ್ತುವದಾದರೆ, ನೀನು ಕೊಯ್ಯುವವನಾಗಿರುತ್ತಿ. ಕನಿಕರದಿಂದ ಕೊಯ್ಯುತ್ತಿ, ನೀನು ಬಿತ್ತಿದ್ದಕ್ಕಿಂತಲೂ ಹೆಚ್ಚಾಗಿ ಕೊಯ್ಯುತ್ತಿ. ಬಿತ್ತುವ ಮತ್ತು ಕೊಯ್ಯುವ ಕುರಿತಾದ ನಿಯಮವಿದು - ಒಂದು ಸಾರಿ ನಾವು ಬಿತ್ತಿದ್ದರೆ, ಅದರ ಬೆಳವಣಿಗೆಯನ್ನು ನಿಲ್ಲಿಸುವದು ಅಸಾಧ್ಯ. ಅದನ್ನು ತಪ್ಪಿಸಲು ಸಾಧ್ಯವಿಲ್ಲ. “ಮನುಷ್ಯನು ಏನನ್ನು ಬಿತ್ತುತ್ತಾನೋ ಇದನ್ನೇ ಅವನು ಕೊಯ್ಯುವನು.” “ಕ್ಷಮಾಪಣೆಯು ಇದ್ದರೂ ಸಹ” ಎಂದು ಒಬ್ಬ ಬರಹಗಾರನು ತಿಳಿಸಿದ್ದಾನೆ.

ಕೆಲವು ಸಾರಿ ನಮ್ಮ ಮಕ್ಕಳಿಗೆ “ನನ್ನನ್ನು ಕ್ಷಮಿಸು” ಎಂದು ಹೇಳಿದಾಗ, ಎಲ್ಲವೂ ಸರಿಯಾಯಿತು ಎಂದು ತಿಳುಕೊಳ್ಳಬೇಕು ಎಂಬ ಪ್ರಭಾವವನ್ನು ಬೀರುತ್ತೇವೆ. ಅಥವಾ ಅವು ಬೆಳೆಯುವಾಗ, ದೇವರಿಗೆ “ನನ್ನನ್ನು ಕ್ಷಮಿಸು” ಎಂದು ಹೇಳುವಂಥದ್ದು, ನಾನು ಪಾಪವನ್ನು ಮಾಡಲೇ ಇಲ್ಲವೇನೋ ಎಂಬುದಾಗಿ ತಿಳಿಸುತ್ತಿತ್ತು. ಅಥವಾ ಒಂದು ವೇಳೆ ಅದು ಬಹಳ ಕೆಟ್ಟ ಪಾಪವಾಗಿದ್ದರೆ, ಅವರು ಸಭೆಯ ಮುಂದೆ ನಿಂತು “ನನ್ನದು ತಪ್ಪಾಯಿತು ಕ್ಷಮಿಸು,” ಎಂದು ಹೇಳುವಂಥದ್ದು ಯಾವುದೇ ಪ್ರತಿವಾದವನ್ನು ತಡೆಯುವಂಥದ್ದಾಗಿತ್ತು. ಪಾಪದ ಕ್ಷಮಾಪಣೆ ಇದ್ದರೂ - ಸಹ - ಅದರ ಪ್ರತಿಫಲ ಇದ್ದೇ ಇರುತ್ತದೆ ಎಂದು ನಮ್ಮ ಮಕ್ಕಳಿಗೆ ತಿಳಿದು ಹೇಳಲು ನಾವು ವಿಫಲರಾಗಿದ್ದೇವೆ. ನಾವು ನಿದ್ರೆ ಮಾಡಲು ಸಾಧ್ಯವಿಲ್ಲ. ಜನರು ನಮ್ಮನ್ನು ನಂಬುವದಿಲ್ಲ ಒಂದು ದಿನ ನಾವು ಫಲವನ್ನು ಕೊಯ್ಯಬೇಕಾಗುತ್ತದೆ.

ನನ್ನ ಕಛೇರಿಯಲ್ಲಿ ಕೆಲವರು ಈ ರೀತಿ ಹೇಳಿದ್ದಾರೆ, “ನಾನು ನನ್ನ ಜೊತೆಯವನಿಗೆ ನನ್ನದು ತಪ್ಪಾಯಿತು! ಕ್ಷಮಿಸು ಎಂದು ಹೇಳಿದರೂ ಸಹ ಅವನು ನನ್ನನ್ನು ನಂಬುವದಿಲ್ಲ!” “ಅಥವಾ ನಾನು, ನನ್ನ ಪಾಪವನ್ನು ಒಪ್ಪಿಕೊಂಡು ಅರಿಕೆ ಮಾಡಿ, ಸಭೆಯವರಿಗೆ ನನಗಾಗಿ ಪ್ರಾರ್ಥಿಸಿ ಎಂದು ಕೇಳಿಕೊಂಡಾಗಲೂ ಸಹ, ಕೆಲವರು ನನ್ನನ್ನು ಸ್ವೀಕಾರ ಮಾಡಿರುವದಿಲ್ಲ. ಇದು ನ್ಯಾಯವಲ್ಲ!” ನಾನು ಪುನ ಪುನ ಅವರ ನೆನಪಿಗೆ ತರುವದೇನೆಂದರೆ, ಪಾಪದ ಕ್ಷಮಾಪಣೆ ಇದ್ದರೂ ಸಹ, - “ಮನುಷ್ಯನು ಏನು ಬಿತ್ತುತ್ತಾನೋ, ಅದನ್ನು ಅವನು ಕೊಯ್ಯಲೇ ಬೇಕು.”

ನೀನು ನಿನ್ನ ಸ್ನೇಹಿತನೊಂದಿಗೆ ಹೋರಾಟ ಮಾಡಿ, ಅವನನ್ನು ಕೆಳಗಡೆ ಬೀಳಿಸಿ - ಎಳೆದಾಡಿ - ನಿನ್ನ ಕೈಯನ್ನು ಮುರಿದು ಕೊಂಡ ಮೇಲೆ ನಿನ್ನ ಸ್ನೇಹಿತನೊಂದಿಗೆ ಸಮಾಧಾನದ ಸಂಧಾನ ಮಾಡಿಕೊಂಡರೂ ಸಹ, ನಿನ್ನ ಕೈ ಮುರಿದು ಕೊಂಡವನಾಗಿಯೇ, ಇರುತ್ತಿ, ಮತ್ತು ಮುರಿದು ಹೋದ ಕೈಗೆ, ಗಾಯದ ಪಟ್ಟಿಯನ್ನು ಕಟ್ಟಿಕೊಂಡಿರುತ್ತಿ ಕ್ಷಮಾಪಣೆ ಉಂಟಾಗಿದ್ದರೂ

ಸಹ, ನೀನು ಬಿತ್ತಿದ್ದನ್ನು ಕೊಯ್ಯುತ್ತಿ.

ದಾವೀದನ ಜೀವನದ ದೃಷ್ಟಾಂತಕ್ಕಿಂತ ಉತ್ತಮವಾದ ಬೇರೆ ಯಾವ ದೃಷ್ಟಾಂತವು ಇರುವದಿಲ್ಲ. ನಮ್ಮ ಹಿಂದಿನ ಪಾಠದಲ್ಲಿ ಬಿತ್ತುವ, ಕುರಿತಾಗಿ ಒತ್ತಿ ಹೇಳಲಾಗಿದೆ - ದಾವೀದನು ಬೆತ್ಷೆಬಳೊಂದಿಗೆ ವ್ಯಭಿಚಾರ ಮಾಡಿ, ಕಪಟತನದಿಂದ, ಬೆತ್ಷೆಬಳ ಗಂಡನನ್ನು ಸಂಹರಿಸಿದನು. ಅನಂತರದ ವರುಷಗಳಲ್ಲಿ ದಾವೀದನು ಕೊಯ್ದು ವಿಷಯಗಳ ಬಗ್ಗೆ ಈ ಮುಂದಿನ ಪಾಠಗಳಲ್ಲಿ ಒತ್ತಿ ಹೇಳಲಾಗುವುದು.

## "ಮನುಷ್ಯನು ಏನನ್ನು ಬಿತ್ತುತ್ತಾನೋ" (2 ಸಮುವೇಲ 11; 12)

ಕೆಲವು ಹಿಂದಿನ ಕಾರ್ಯಗಳನ್ನು ನೆನಪು ಮಾಡಿಕೊಳ್ಳುವಾಗ; ದಾವೀದನು ದುಖಕರ ವಾದ ಕೊಯ್ಯುವ ಕಥೆಯನ್ನು ಗ್ರಹಿಸುವವರಾಗಿರುತ್ತೇವೆ.

2 ಸಮುವೇಲ 3ನೇ ಅಧ್ಯಾಯಕ್ಕೆ ಹಿಂದಿರುಗೋಣ. 2 ಸಮುವೇಲ 3ರ ಸಮಯದಲ್ಲಿ, ದಾವೀದನು ಯೂದಾ ಕುಲವನ್ನು ಮಾತ್ರ ಆಳುತ್ತಿದ್ದನು. ಹೆಬ್ರೋನು ಅವನ ರಾಜಧಾನಿಯಾಗಿತ್ತು. ವಚನ 2ರಲ್ಲಿ ನೋಡುತ್ತೇವೆ, "ಹೆಬ್ರೋನಿನಲ್ಲಿ ದಾವೀದನಿಗೆ ಹುಟ್ಟಿದ ಮಕ್ಕಳು: ಚೊಚ್ಚಲ ಮಗನು ಅಮ್ನೋನನು, ಇವನು ಇಜ್ರೇಲಿನವಳಾದ ಅಹೀನೋವ ಮಳಲ್ಲಿ ಹುಟ್ಟಿದವನು." "ಅಹೀನೋಮವಳು ದಾವೀದನ ಎರಡನೆಯ ಹೆಂಡತಿ" (ಅವನ ಮೊದಲ ಹೆಂಡತಿಯಾದ ಮೀಕಲಳಿಗೆ ಮಕ್ಕಳಿರಲಿಲ್ಲ). ವಚನ 3ರಲ್ಲಿ ನಾವು ಓದುತ್ತೇವೆ, "ಎರಡನೆಯವನು ಕಿಲಾಬನು, ಇವನು ಕರ್ಮೆಲ್ಯನಾದ ನಾಬಾಲನ ಹೆಂಡತಿಯಾಗಿದ್ದ ಅಬೀ ಗೈಲಳಲ್ಲಿ ಹುಟ್ಟಿದವನು." ಅಬೀಗೈಲಳು ನಾಬಾಲನ ವಿಧವೆಯಾಗಿದ್ದಳು. ಅವಳು ದಾವೀದನ ಮೂರನೇ ಹೆಂಡತಿ. (ಅವಳು ಮೂರ್ಖನಾದ ನಾಬಾಲನ ವಿವೇಕಿಯಾದ ಹೆಂಡತಿಯಾಗಿದ್ದಳು ಎಂದು ನೀವು ನೆನಪು ಮಾಡಿಕೊಳ್ಳುವಿರಿ.) ವಚನ 3 ಈ ರೀತಿ ಮುಂದುವರಿಯುತ್ತದೆ, "ಮೂರನೆಯವನು, ಅಬ್ಷಾಲೋಮನು; ಇವನು ಗೆಷೂರಿನ ಅರಸನಾದ ತಲ್ಮೈ ಎಂಬವನ ಮಗಳಾದ ಮಾಕಳ ಪುತ್ರನು." ಈ ಭಾಗವು ಸಹ ಇನ್ನೊಬ್ಬ ಪತ್ನಿಯ ಬಗ್ಗೆ ತಿಳಿಸುತ್ತದೆ: ಅವಳು ಮಾಕಳು, ಸಿರಿಯದ ಗೆಷೂರಿನ ರಾಜಕುಮಾರಿ. ಆಕೆಯ ತಂದೆಯಾದ, ತಲ್ಮೈ ಬಗ್ಗೆ ಗಮನವಿರಲಿ; ಅವನ ಕುರಿತಾಗಿ ಪುನ ನೋಡೋಣ. ವಚನ 4 ಮತ್ತು 5ರಲ್ಲಿ, ಮಿಕ್ಕಾದ ಮೂರು ಮಕ್ಕಳನ್ನು ನೋಡುತ್ತೇವೆ, ಆ ಮೂವರಿಗೂ, ಬೇರೆ, ಬೇರೆ, ತಾಯಿಯರಿದ್ದರು. ದಾವೀದನು ಹೆಂಡತಿಯರನ್ನು ಮಾಡಿಕೊಂಡು, ಮಕ್ಕಳನ್ನು ಗಮನಿಸೋಣ: (ವಚನ 3), ದೊಡ್ಡವನಾದ ಅಮ್ನೋನನು (ವಚನ 2) ಮೂರನೇಯವನಾದ ಅಬ್ಷಾಲೋಮನು.

ಈ ಪಾಠವು ಇವರಲ್ಲಿ, ಎರಡನೇಯವನಾದ, ಅಬ್ಷಾಲೋಮನ ಕುರಿತಾಗಿ ಇರುವದರಿಂದ, ಅವನ ಹಿನ್ನೆಲೆಯನ್ನು ನೋಡಲು 2 ಸಮುವೇಲ 14ನ್ನು ಗಮನಿಸೋಣ. ವಚನ 25 ಮತ್ತು 26 ಅಬ್ಷಾಲೋಮನ ಬಗ್ಗೆ ಸೇರಿರುವಂಥ ವಿವರಣೆಯಾಗಿರುತ್ತದೆ. ವಚನ 25 ಹೇಳುತ್ತದೆ, "ಸೌಂದರ್ಯದಲ್ಲಿ[1] ಅಬ್ಷಾಲೋಮನನಂತೆ ಹೆಸರುಗೊಂಡ ಪುರುಷನು ಇಸ್ರಾಯೇಲ್ಯರಲ್ಲಿ ಒಬ್ಬನೂ ಇರಲಿಲ್ಲ ಅವನಲ್ಲಿ ಅಂಗಾಲಿನಿಂದ ನಡುನೆತ್ತಿವರೆಗೆ ಒಂದು ದೋಷವಾದರೂ ಇರಲಿಲ್ಲ" (ನನ್ನ ಬಗ್ಗೆ ಈ ರೀತಿ ವಿವರ ನೀಡಿದವರು ನನ್ನ ತಾಯಿ ಮಾತ್ರ!) ದಾವೀದನು ಅವನನ್ನು ದೃಷ್ಟಿಸಿದಾಗ, ಆ ಯೋಚನೆಯು ಆತನ ಹೃದಯವನ್ನು ರಭಸವಾಗಿ ಚಲಿಸುವಂತೆ ಮಾಡಿತು "ಇಂಥಾ ಒಂದು ಸುರಸುಂದರನನ್ನು ನಾನು ಹೇಗೆ ಈ ಭೂಲೋ ಕಕ್ಕೆ ನೀಡಿದೆ ಎಂದು ಯೋಚಿಸಿದನು!"

ವಚನ 26 ತಿಳಿಸುತ್ತದೆ, "[ಅಬ್ಷಾಲೋಮನ] ತಲೆಗೂದಲು ಬಹುಬಾರವಾಗುವದರಿಂದ, ಪ್ರತಿವರುಷದ ಅಂತ್ಯದಲ್ಲಿ ಬೋಳಿಸಿಕೊಳ್ಳುವನು. ಆಗ ಅವನ ಕೂದಲು ಸರಕಾರಿ ತೂಕದ ಪ್ರಕಾರ ಇನ್ನೂರು ರೂಪಾಯಿ ತೂಕವಾಗುತ್ತಿತ್ತು." ಇನ್ನೂರು ಶೆಕೆಲ್ಸ್ ಅಂದರೆ ಮೂರರಿಂದ ಐದು ಪೌಂಡುಗಳು ಹೋಲಿಕೆ ಮಾಡಿದರೆ ಮಾತ್ರ. ಆದರೂ ನಾನು ಎರಡು

ಪೌಂಡಿನ ಬೆಲೆಯ ಹುರುಳಿ ಕಾಯಿಯ ಚೀಲವನ್ನು ನೋಡಿದ್ದೇನೆ. ಅದು ಬಾರವಾಗಿರುತ್ತದೆ.[2] ಈಗ ನಮಗೆ ತಿಳಿಯುತ್ತದೆ ಯಾಕೆ ಅಬ್ಷಾಲೋಮನು ತನ್ನ ಬಾರವಾದ ಕೂದಲನ್ನು ಬೋಳಿಸಿದನು ಎಂದು, ಅವನು ಅದನ್ನು ತೂಕ ಮಾಡಿದ್ದು ಆಸಕ್ತಿಕರವಲ್ಲವೇ? ನೀನು ಕಳೆದ ಸಾರಿ ನಿನ್ನ ಕೂದಲನ್ನು - ಕತ್ತರಿಸಿದಾಗ ಅದನ್ನು ತೂಕಮಾಡಿರುವಿಯೋ? ಅಬ್ಷಾಲೋಮನ ವ್ಯರ್ಥತ್ವವು ಈ ಮೂಲಕ ಕಾಣಿಸಿತು. ಅವನು ಹೊಂದಿದ್ದ ಸುಂದರವಾದ, ತೂಗಾಡುತ್ತಿದ್ದ, ಕಾಗೆಯ ರಪ್ಪಿನಂತಿದ್ದ ಯೆಹೋದ್ಯನ ಕೂದಲಿನ ಬಗ್ಗೆ ಅವನು ಹೆಮ್ಮೆಯುಳ್ಳವನಾಗಿದ್ದನು.

ಈ ಸುಂದರವಾದ ಯೌವನಸ್ಥನನ್ನು! ದಾವೀದನು ಪ್ರತಿಸಾರಿ ದಾಟಿ ಹೋಗುವಾಗ, ಅವನ ಮಗನ, ಬಳಿ ನಿಂತು, ಅವನ ಬೆನ್ನನ್ನು ಮತ್ತು ತಲೆಯನ್ನು ನೇವರಿಸಿ, "ಎಂಥಾ ಸುಂದರವಾದ ಮಗು ಎಂದು ಹೇಳಿದ್ದನು!"

ಮುಂದಿನ ಕೆಲವು ವರ್ಷಗಳನ್ನು ದಾಟಿಕೊಳ್ಳೋಣ. ಹೆಬ್ರೋನಿನಲ್ಲಿ ಏಳು ವರುಷಗಳು ಕಳೆದ ಮೇಲೆ, ದಾವೀದನು ಯೆರುಸಲೇಮನ್ನು ವಶಪಡಿಸಿಕೊಂಡು, ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. 2 ಸಮುವೇಲ 5:13ರಲ್ಲಿ "ದಾವೀದನು ಹೆಬ್ರೋನಿನಿಂದ ಯೆರೂಸಲೇಮಿಗೆ ಬಂದ ಮೇಲೆ ಅಲ್ಲಿಯೂ ಅನೇಕ ಸ್ತ್ರೀಯರನ್ನು, ಪತ್ನಿಯರನ್ನಾಗಿಯೂ,[3] [ಸುಮಾರು 10 ಮಂದಿ][4] ಉಪ ಪತ್ನಿಯರನ್ನಾಗಿಯೂ ಮಾಡಿಕೊಂಡಿದ್ದರಿಂದ ಅವನಿಗೆ ಇನ್ನು ಕೆಲವು ಮಂದಿ ಗಂಡು ಹೆಣ್ಣು ಮಕ್ಕಳು ಹುಟ್ಟಿದರು." ವಚನ 14 ರಿಂದ 16 ರವರೆಗೆ ಇನ್ನೂ ಹನ್ನೊಂದು ಮಕ್ಕಳ ಪಟ್ಟಿ ಇರುತ್ತದೆ. ದಾವೀದನ ಕುಟುಂಬದ ವಂಶವೃಕ್ಷದ ಮೇಲ್ಬಾಗವು - ಭಾರವಾಗುತ್ತಿತ್ತು - ಮತ್ತು ಕೆಲವು ಹಣ್ಣುಗಳು ಕೊಳೆಯುವುದಕ್ಕೆ ಪ್ರಾರಂಭವಾಯಿತು.

ಈ ಹಿಂದಿನ ಪಾಠದಲ್ಲಿ, ದಾವೀದನು ಅರಸನಾದ - ಮೊದಲ ದಿವಸಗಳಲ್ಲಿ ಅವನಿಗುಂಟಾದ ಯಶಸ್ಸನ್ನು ಕುರಿತು ನೋಡಿದ್ದೇವೆ. ಅವನು ಜಯ ಪ್ರದನಾದ ಸೈನಿಕನಾಗಿದ್ದನು. ವಿವೇಕಿಯಾದ ರಾಜ ತಾಂತ್ರಿಕನು, ಜ್ಞಾನಿಯಾದ ವ್ಯವಸ್ಥಾಪಕನೂ ಆಗಿದ್ದನು. ಹಾಗೂ ಎಡಬಿಡದೆ ದೇವರನ್ನು ಆರಾಧಿಸುವವನೂ ಆಗಿದ್ದನು. ಆದರೆ ಒಂದು ವಿಷಯ, ದಾವೀದನನ್ನು ಒಬ್ಬ ಕುಟುಂಬಸ್ಥನನ್ನಾಗಿ ನಾವು ಕಾಣಲಿಲ್ಲ. ಅವನು ಹೆಂಡತಿಯರನ್ನು ಮಾಡಿಕೊಂಡು ಮಕ್ಕಳನ್ನು ಪಡೆಯುವದಕ್ಕೆ ಸಮಯ ನೀಡಿದ್ದನು. ಆದರೆ ಆ ಮಕ್ಕಳನ್ನು ನೀಟಾದ ಮಾರ್ಗದಲ್ಲಿ ನಡೆಸಲು ಅವನು ಸಮಯವನ್ನು ತೆಗೆದುಕೊಳ್ಳಲಿಲ್ಲ.

ಕೊನೆಯದಾಗಿ 2 ಸಮುವೇಲ 11ರಲ್ಲಿ ದಾವೀದನಿಗೆ ಸ್ವಲ್ಪ ಸಮಯವು ದೊರೆಯಿತು. ಆ ಸಮಯವನ್ನು ಕುಟುಂಬಕ್ಕಾಗಿ, ಉಪಯೋಗಿಸಲಿಲ್ಲ. ಅದರ ಬದಲು ಅವನು ಬೇಸರದಿಂದ ತಿರುಗಾಡುತ್ತಿರುವಾಗ, ಒಂದು ಸುಂದರವಾದ ಸ್ತ್ರೀ ಸ್ನಾನ ಮಾಡುತ್ತಿದ್ದನ್ನು ನೋಡಿದನು. ಆಕೆಯೊಂದಿಗೆ ವ್ಯಭಿಚಾರ ನಡೆಸಿದಾಗ, ಪಾಪದ ಮೇಲೆ ಪಾಪವನ್ನು ಸೇರಿಸಿದನು ಅದು ಒಂದು ಮಧ್ಯಾಹ್ನ, ಒಂದೇ ಮಧ್ಯಾಹ್ನ ಕಡಿವಾಣ ಇಲ್ಲದ ದುರಾಶೆಯು, ದೇವರಿಗೆ ಜೀವನವನ್ನೇ ಮೀಸಲಾಗಿಟ್ಟಿದ ದಾವೀದನಲ್ಲಿ ಕಾರ್ಯಮಾಡಿತು. ಇದು ಸತ್ಯವಲ್ಲವೇ. "ಮನುಷ್ಯನು ಏನನ್ನು ಬಿತ್ತುತ್ತಾನೋ, ಅದನ್ನು ಅವನು ಕೊಯ್ಯಲೇ ಬೇಕು"? ವಿವಿಧ ರೀತಿಯಲ್ಲಿ ಅವನು ಕೊಯ್ದನೋ? ಅವನು ಬಿತ್ತಿದ್ದಕ್ಕಿಂತಲೂ ಹೆಚ್ಚಾಗಿ ಕೊಯ್ದನೋ? ನಾವು ಈ ಕಥೆಯನ್ನು ಮುಂದುವರಿಸೋಣ.

ನಮ್ಮ ಕಳೆದ ಪಾಠದಲ್ಲಿ, "ನೀನೇ ಆ ಮನುಷ್ಯನು!" ಎಂದು ಪ್ರವಾದಿಯಾದ ನಾತಾನನು, ದಾವೀದನಿಗೆ ಹೇಳಿದ ಕ್ರಿಯೆಯ ಚಿತ್ರಣವನ್ನು ನೋಡಿದ್ದೇವೆ (2 ಸಮುವೇಲ 12:7). ದಾವೀದನು ಮಾನಸಾಂತರದಿಂದ, "ಯೆಹೋವನಿಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆ" ಎಂದು ಅವನು ದುಖ ಪಟ್ಟದ್ದನ್ನೂ ನೋಡಿದ್ದೇವೆ (2 ಸಮುವೇಲ 12:13ಎ). ಕೀರ್ತನೆ 51ರಲ್ಲಿ, ಅವನ ಬೇಸರದ ಆಳವನ್ನು ನೋಡಿದ್ದೇವೆ. ನಾತಾನನು ನಿಶ್ಚಯವಾಗಿ ತಿಳಿಸಿದಂತೆ ಕೀರ್ತನೆ 32ರಲ್ಲಿ ಅವನ ಹೃದಯದ ಸಂತೋಷವನ್ನು ಗಮನಿಸಿದ್ದೇವೆ, "ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ; ನೀನು ಸಾಯುವದಿಲ್ಲ" (2 ಸಮುವೇಲ 12:13ಬಿ). ದೇವರ

ಕೃಪಾತಿಶಯವನ್ನು ಹೊಂದಿರುವದು ಆಶ್ಚರ್ಯವಲ್ಲವೇ? ಹಳೇ ಒಡಂಬಡಿಕೆಯಲ್ಲಿಯೂ ಸಹ "ನೀನು ಸಾಯುವದಿಲ್ಲ. ನಿನ್ನನ್ನು ಕಲ್ಲೆಸೆದು ಕೊಲ್ಲುವದಿಲ್ಲ ಎಂಬುದನ್ನು ವ್ಯಭಿಚಾರಿಗಳಿಗೆ, ಧರ್ಮಶಾಸ್ತ್ರದ ಪ್ರಕಾರ ಶಿಕ್ಷೆ ಆದರೂ ನೀನು ಸಾಯುವದಿಲ್ಲ!" ದಾವೀದನ ಬಾಯಿಂದ ಆರು ಪದಗಳನ್ನು ಹೊರಹೊಮ್ಮಿದವು: "ನಾನು ಯೆಹೋವನಿಗೆ ವಿರುದ್ಧವಾಗಿ ಪಾಪ ಕಾರ್ಯವನ್ನು ಮಾಡಿದ್ದೇನೆ." ಈ ಎಲ್ಲದ್ದರಿಂದ, ದಾವೀದನು ಸಕಲ ಕಾರ್ಯಗಳನ್ನು ಸರಿಪಡಿಸಿ ಕೊಂಡನು. ಅವನಿಗೆ ಯಾವುದೇ ತೊಂದರೆ ಉಂಟಾಗಲಿಲ್ಲ. ಎಲ್ಲವೂ ಎಂದಿನಂತೆ ಸರಿಯಾಯಿತು.

ಇಲ್ಲ.

ಎಲ್ಲವು ಎಂದಿನಂತೆ ಸರಿಯಾಗಲಿಲ್ಲ.

"ಮನುಷ್ಯನು ಏನು ಬಿತ್ತುತ್ತಾನೋ, ಅದನ್ನೇ ಕೊಯ್ಯುತ್ತಾನೆ" ಪಾಪದ ಕ್ಷಮಾಪಣೆ ಹೊಂದಿದ್ದರೂ ಸಹ.

## "ಅದನ್ನೇ ಅವನು ಕೊಯ್ಯುತ್ತಾನೆ" (2 ಸಮುವೇಲ 12-19)

12:10 ರಲ್ಲಿ ನಾತಾನನು ದಾವೀದನಿಗೆ ಹೇಳಿದ ಮಾತನ್ನು ಗಮನಿಸಿರಿ: "ಆದುದರಿಂದ, ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವದಿಲ್ಲ." ಅಲ್ಲಿರುವ ನಿರ್ದಿಷ್ಟವಾದ ಉದಾಹರಣೆಯನ್ನು ಗಮನಿಸಿ 12:11: "ಯೆಹೋವನಾದ ನನ್ನ ಮಾತನ್ನು ಕೇಳು - ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು ಉಂಟಾಗುವಂತೆ ಮಾಡುವೆನು. ನಿನ್ನ ಹೆಂಡತಿಯರನ್ನು ತೆಗೆದು ನಿನ್ನೆದುರಿನಲ್ಲಿಯೇ ಇನ್ನೊಬ್ಬನಿಗೆ ಕೊಡುವೆನು. ಅವನು ಹಗಲಿನಲ್ಲಿಯೇ ಅವರ ಕೂಡ ಮಲಗುವನು."

ದಾವೀದನ ಪ್ರತಿಕ್ರಿಯೆಯನ್ನು ನಾನು ಆಲಿಸುತ್ತೇನೆ: "ದೇವರೇ ಒಂದು ಕ್ಷಣ ನಿಧಾನಿಸು ನಾನು ಈಗಾಗಲೇ. ಕ್ಷಮಿಸಲ್ಪಟ್ಟಿರುವದರಿಂದ ಈ ಕಾರ್ಯ ನ್ಯಾಯಬದ್ಧವಲ್ಲ! ನಾನು ನಿನಗೆ ಮೋಡಿಯ ಮಾತನ್ನು ಹೇಳಿದ್ದೇನೆ. ನಾನು ಏನನ್ನು ಮಾಡ ಬೇಕೋ ಅದನ್ನೇ ಮಾಡಿದ್ದೇನೆ. ಕರ್ತನೆ, ಅದರ ಅರ್ಥ, ಕತ್ತಿಯು ಎಂದಿಗೂ ನನ್ನ ಮನೆಯನ್ನು ಬಿಟ್ಟು ಹೋಗುವದಿಲ್ಲವೇ?"

"ನಾನು ಹೇಳಿದ ಮಾತು ಸತ್ಯವೇ. ಮನುಷ್ಯನು ಏನನ್ನು ಬಿತ್ತುತ್ತಾನೋ ಅದನ್ನೇ ಅವನು ಕೊಯ್ಯುವನು - ಪಾಪ ಕ್ಷಮಾಪಣೆ ಉಂಟಾಗಿದ್ದರೂ ಸಹ."

ಪಾಪದ ಮನೋಭಾವವು ತೆಗೆದು ಹಾಕಲ್ಪಟ್ಟಿದ್ದರೂ ಸಹ, ಅದರ ಪರಿಣಾಮವು ಅಂಟಿಕೊಂಡೇ ಇರುತ್ತದೆ. ಪಾಪದ ಬಗ್ಗೆ ನಾವು ಅರ್ಥಮಾಡಿಕೊಳ್ಳುತ್ತಿದ್ದೇವೋ? ಪಾಪವನ್ನು ಹಗುರವಾಗಿ ಪರಿಗಣಿಸಬಾರದು, "ಇದರ ಬಗ್ಗೆ ಚಿಂತೆ ಬೇಡ. ಅದನ್ನು ನಾನು ಕ್ಷಣದಲ್ಲೇ ಪರಿಹರಿಸಿಕೊಳ್ಳುತ್ತೇನೆ ಎಂಬುದಾಗಿ ನಾವು ಹೇಳಿಕೊಳ್ಳ ಬಹುದು." ದಾವೀದನ ಜೀವಿತದ ಸಾವಿರಾರು ದಿನಗಳಲ್ಲಿ, ಅದು ಒಂದು ಸಾಯಂಕಾಲ ಮಾತ್ರ, ಒಂದೇ ಸಾಯಂಕಾಲ - ಆದರೆ ಅದು ಅವನನ್ನು ವರ್ಷಗಳ ಕಾಲ ಅಂಟಿಕೊಂಡಿತ್ತು.

12:10ರಲ್ಲಿ "ಮನೆ" ಎಂಬ ಪದವನ್ನು ಗಮನಿಸಿ. ವಚನ 11ರಲ್ಲಿ: "ಮನೆಯವರಿಂದಲೇ" "ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವದಿಲ್ಲ ನಾನು ನಿನ್ನ ಮನೆಯವರಿಂದಲೇ ಕೇಡು ಉಂಟಾಗುವಂತೆ ಮಾಡುವೆನು." ಮನೆಗೆ ವಿರೋಧವಾಗಿ ನಿರಂತರವಾದ ಕೇಡು ಸಂಭವಿಸುತ್ತದೆ; ಮುನ್ನೆಚ್ಚರಿಕೆ ಇಲ್ಲದೆ ಬಿರುಗಾಳಿಯು ಬೀಸುತ್ತದೆ. ಮನೆಯು ಯಾವ ಸ್ಥಿತಿಯಲ್ಲಿರಬೇಕೋ, ಆ ರೀತಿ ಇರುವದಕ್ಕೆ ಸಾಧ್ಯವಾಗುವದಿಲ್ಲ. ಮನೆಯನ್ನು ನಾಶಮಾಡುವ ಬಿರುಗಾಳಿಯು ಕುಟುಂಬದಿಂದಲೇ ಉದ್ಭವಿಸುತ್ತದೆ. ದಾವೀದನ ಪಾಪದ ನಿಮಿತ್ತ ಅವನ ಮನೆಯು ಬಿರುಗಾಳಿಯಿಂದ ಎಡೆಬಿಡದೆ ತತ್ತರಿಸುತ್ತಿತ್ತು.

ದಾವೀದನು ಬೆತ್ಷೆಬಳೊಂದಿಗೆ ನಡೆಸಿದ ವ್ಯಭಿಚಾರದಿಂದ, ಹುಟ್ಟಿದ ಗಂಡು ಮಗುವು ಹಸುನೀಗಿತು ಎಂದು ನಮ್ಮ ಹಿಂದಿನ ಅಧ್ಯಯನದಲ್ಲಿ ಕಲಿತ್ತಿದ್ದೇವೆ. ಇದು ಪಾಪದ, ಮೊದಲನೆಯ ಪರಿಣಾಮ. ಮತ್ತು ಈ ಪರಿಣಾಮಗಳು ಹೇಗೆ ಮುಂದುವರಿದವು ಎಂದು

ನೋಡಲು, 2 ಸಮುವೇಲ 13ರನ್ನು ನೋಡೋಣ.

**ಬಲತ್ಕಾರ ಅತ್ಯಾಚಾರ (13:1-19)**

ಅಧ್ಯಾಯ 13ರ ಪ್ರಥಮ ಭಾಗದಲ್ಲಿ ಸಂಭವಿಸಿದ ಘಟನೆಯು, ಬೈಬಲಿನಲ್ಲಿಯೇ ಅತಿ ದುಖಕರವಾದ ಸಂಗತಿ ಎಂದು ನಾನು ತಿಳಿದಿದ್ದೇನೆ. ಅದು ಸಾಧ್ಯ ಯಾಕೆಂದರೆ ನನಗೂ ಸಹ ಮೂರು ಜನ ಹೆಣ್ಣು ಮಕ್ಕಳಿದ್ದಾರೆ. ಈ ದಿವಸಗಳಲ್ಲಿ ಅವಶ್ಯವಿದ್ದರೆ ಈ ಘಟನೆಯನ್ನು TV. ಚಿತ್ರಣ ಮಾಡಿ, ಈ - ಬೈಬಲ್ - ಕಥೆಯನ್ನು ಪ್ರಸಾರ ಮಾಡಬಹುದು. ಪಾಪದ ಕುರಿತಾದ ಯೋಚನೆಯು, ಸಹ, ಹೊಲಸಾದುದ್ದಾಗಿರುತ್ತದೆ. ಅದನ್ನು ಮಾತನಾಡುವದು ಸಹ ಹೊಲಸಾದದ್ದೇ, ಆದರೂ ಪಾಪದ ಪರಿಣಾಮದ ಕುರಿತು ಪಾಠವನ್ನು ಕಲಿಯೋಣ. ಆದುದರಿಂದ ಬೇಗನೆ ಮುಂದಕ್ಕೆ ಹೋಗೋಣ.

ಈ ಅಧ್ಯಾಯವು ಈ ರೀತಿಯಾಗಿ ಪ್ರಾರಂಭವಾಗುತ್ತದೆ, "ದಾವೀದನ ಮಗನಾದ ಅಬ್ಷಾಲೋಮನಿಗೆ ತಾಮಾರಳೆಂಬ ಬಹು ಸುಂದರಿಯಾದ ಒಬ್ಬ ತಂಗಿ ಇದ್ದಳು" (13:1ಎ). ಮೂರನೇ ಅಧ್ಯಾಯದ ನಂತರ ಅಬ್ಷಾಲೋಮನ ಕುರಿತಾಗಿ ಇಲ್ಲಿ ಮೊದಲಸಾರಿ ನೋಡುತ್ತೇವೆ. ಈಗಾಗಲೇ 20 ವರ್ಷಗಳು ಕಳೆದು ಹೋಗಿದ್ದವು. ದಾವೀದನೇ ಈ ಎಲ್ಲಾ ವರ್ಷಗಳು ನೀನು ಏನು ಮಾಡುತ್ತಿದ್ದೀ? "ನಾನು ಸೈನ್ಯವನ್ನು ನಡಿಸುತ್ತಿದ್ದೆ. ದೇಶದ ಒಳಿತನ್ನು ಗಮನಿಸುತ್ತಿದ್ದೆ. ನಾನು ಮದುವೆಯನ್ನು ಮಾಡಿಕೊಳ್ಳುತ್ತಾ ಮಕ್ಕಳನ್ನು ಪಡೆಯುತ್ತಿದ್ದೆ." ಆದರೆ ಕುಟುಂಬದ, ಬಗ್ಗೆ ಏನು ಮಾಡಿದೆ? ಯಾವ ವಿಧವಾದ ಸಂಬಂಧವನ್ನು ನಿನ್ನ ಕುಟುಂಬಕ್ಕೆ ನೀಡಿದೆ? ಸಾಮಾನ್ಯವಾಗಿ ಇದನ್ನು ಮಾಡಲಿಲ್ಲ.

ಬೆತ್ಸೇಬಳೊಂದಿಗೆ ದಾವೀದನು ಪಾಪ ಮಾಡುವದಕ್ಕಿಂತ ಮೊದಲು, ಅವನು, ಅಪ್ಪಣೆ ನೀಡಲು ಅದನ್ನು ಜನರು ನೆರವೇರಿಸುತ್ತಿದ್ದರು. ಎಲ್ಲರೂ ಅವನನ್ನು ಗೌರವಿಸುತ್ತಿದ್ದರು. ಆದರೆ ಈಗ ಅವನು ಗೌರವವನ್ನು ಕಳೆದು ಕೊಂಡಿದ್ದನು. ಮುಖ್ಯವಾಗಿ, ಅವನ ಮಕ್ಕಳು ಅವನನ್ನು ಗೌರವಿಸುತ್ತಿರಲಿಲ್ಲ. ದಾವೀದನು ಅವರಿಗೆ ತಂದೆಯ ಬದಲಾಗಿ, ಯುಕ್ತಿಯ ವ್ಯಕ್ತಿಯಾಗಿ ಕಾಣಿಸಿದನು.

"ದಾವೀದನ ಮಗನಾದ ಅಬ್ಷಾಲೋಮನಿಗೆ ತಾಮಾರಳೆಂಬ ಬಹು ಸುಂದರಿಯಾದ ತಂಗಿ ಇದ್ದಳು."[5] ಇತರ ಎಲ್ಲಾ ಸಹೋದರ, ಸಹೋದರಿಯರು ಇತರ ತಾಯಿಯರಲ್ಲಿ ಹುಟ್ಟಿದವರು. ಆದರೆ ಸುಂದರಿಯಾದ ತಾಮಾರಳು ಅವನ ಸ್ವಂತ ತಂಗಿಯಾಗಿದ್ದಳು.[6]

ವಚನ 1ನ್ನು ಓದುತ್ತಾ ಮುಂದುವರಿಯೋಣ: "ದಾವೀದನ ಮಗನಾದ ಅಮ್ನೋನನು ಆಕೆಯನ್ನು ಮೋಹಿಸಿದನು." ಅವನ ಬಗ್ಗೆ ಮೂರನೇ ಅಧ್ಯಾಯದಲ್ಲಿ ನೋಡಿದ್ದೆವು. ಮತ್ತು ಈಗ ಮೊದಲಸಾರಿ, ಅವನ ಕುರಿತು ನೋಡುತ್ತಿದ್ದೇವೆ. ಅಮ್ನೋನನು, ದಾವೀದನ ಮೊದಲ ಮಗನಾಗಿದ್ದದ್ದನ್ನು ನೆನಪು ಮಾಡಿ ಕೊಳ್ಳಿರಿ. ಅವನೇ, ಮುಂದೆ ದಾವೀದನ ಸಿಂಹಾಸನದ ವಾರಸುದಾರನು. ಅವನೇ ಕಿರೀಟಧಾರಣೆ ಮಾಡ ಬೇಕಾದ ರಾಜಕುಮಾರನು ಈ "ಅಮ್ನೋನನು … [ತಾಮಾರಳನ್ನು] ಪ್ರೀತಿಸಿದನು." ಇದು "ಪ್ರೀತಿ" ಪದ ನುಡಿ "ನಾವು ಪ್ರೀತಿಸೋಣ."[7] ಅಮ್ನೋನನು ದುರಾಶೆಯಿಂದ ತುಂಬಿದವನಾಗಿದ್ದನು. ಅವನು ತನ್ನ ತಂಗಿಗಾಗಿ ಖಾಯಿಲೆ ಗೀಡಾಗುವಷ್ಟು ಹಾತೊರೆದನು, ಆದರೆ ಅವನಿಗೆ ಏನು ಮಾಡಬೇಕೆಂಬುದಾಗಿ ತಿಳಿಯಲಿಲ್ಲ. ಅವಳು ಅರಸನ ಕನ್ಯಾಕುಮಾರಿಯಾಗಿದ್ದರಿಂದ, ಅರಮನೆಯ ಇನ್ನೊಂದು ಭಾಗದಲ್ಲಿ ತಾಮಾರಳನ್ನು ಸುರಕ್ಷಿತವಾಗಿ ಇಟ್ಟು, ಬೀಗ ಸಹ ಹಾಕಲಾಗಿತ್ತು.[8]

"ಆದರೆ ಅಮ್ನೋನನಿಗೆ ಯೋನಾದಾಬನೆಂಬ,[9] ಒಬ್ಬ ಗೆಳೆಯನಿದ್ದನು" (13:3). ನೀವು ತಪ್ಪು ಮಾಡಬೇಕಾದರೂ, ನಿಮಗೆ ಸಹಾಯಿಸುವ "ಸ್ನೇಹಿತನು" ದೊರಕುತ್ತಾನೆ. ಅದು ಅಸಾಧ್ಯವಾದದಲ್ಲ. ಅವನು ನಿಮಗೆ ಪ್ರೋತ್ಸಾಹಿಸಿ ಅದನ್ನು ಹೇಗೆ ಮಾಡಬೇಕೆಂದು ಸಲಹೆಯನ್ನು ಸಹ ನೀಡುವನು.[10] ಯೋನಾದಾಬನು, ಅಮ್ನೋನನಿಗೆ "ರಾಜಪುತ್ರನೇ,

ನೀನು ದಿನೇ ದಿನೇ ಕ್ಷೀಣನಾಗುತ್ತಾ ಬರುವದೇಕೆ?" (13:4). ಬೇರೆ ಅರ್ಥದಲ್ಲಿ, ನೀನು ಕಿರೀಟಧಾರಣ ಮಾಡಬೇಕಾದ ರಾಜಪುತ್ರನು ಮತ್ತು ಎಲ್ಲಾ ಅಧಿಕಾರವು ನಿನ್ನದಾಗಿದ್ದರೂ, "ಯಾಕೆ ಬೇಕಾದ ರಾಜಪುತ್ರನು ಮತ್ತು ಎಲ್ಲಾ ಅಧಿಕಾರವು ನಿನ್ನದಾಗಿದ್ದರೂ, ಯಾಕೆ ನೀನು ಅಸಂತೋಷವಾಗಿದ್ದಿ? ನಿನ್ನನ್ನು ಸಂತೋಷಪಡಿಸುವ ಸಂಗತಿ ಏನು? ಅದನ್ನು ಹೇಗೆ ಪಡೆಯಬೇಕು ಎಂದು ನಾನು ತಿಳಿಸುತ್ತೇನೆ ಅಂದನು."

ಅವರು ಹೇಗೆ ತಮ್ಮ ಕೈಚಳಕವನ್ನು ದಾವೀದನಿಗೆ ತೋರಿಸಿದರು ಎಂದು ಗಮನಿಸಿ. ಅಮ್ನೋನನು ತನ್ನನ್ನು ಕಾಡುವ ವಿಷಯವನ್ನು ಯೋನಾದಾಬನಿಗೆ ತಿಳಿಸಿದ ನಂತರ ಯೋನಾದಾಬನು ಅವನಿಗೆ, ನೀನು ಅಸ್ವಸ್ಥನಾದಂತೆ ಹಾಸಿಗೆಯ ಮೇಲೆ ಮಲಗಿಕೋ,

> ನಿನ್ನ ತಂದೆಯು ನಿನ್ನನ್ನು ನೋಡುವದಕ್ಕೆ ಬಂದಾಗ ಅವನಿಗೆ - "ದಯವಿಟ್ಟು ನನ್ನ ತಂಗಿಯಾದ ತಾಮಾರಳನ್ನು ನನಗಾಗಿ ಆಹಾರ ಸಿದ್ಧಮಾಡುವದಕ್ಕೆ ಕಳುಹಿಸು. ಆಕೆ ನನ್ನೆದುರಿನಲ್ಲಿಯೇ ಸಿದ್ಧಮಾಡಿ ಕೊಡುವದಾದರೆ ಊಟಮಾಡೇನು ಎಂದು ಹೇಳು ಅಂದನು" (13:5).

ಅಮ್ನೋನನು, ಯೋನಾದಾಬನು ಹೇಳಿದಂತೆ ಮಾಡಿದನು. ದಾವೀದನು, ಅಮ್ನೋನನನ್ನು, ಸಹಜವಾಗಿ ಸಂಧಿಸಿದಾಗ, ಯೋನಾದಾಬನು ಹೇಳಿದ ಸುಳ್ಳನ್ನು ತಿಳಿಸಿದನು. ಅಮ್ನೋನನು ತಂದೆಯಾದ ದಾವೀದನನ್ನೋ ಯಾವುದೇ ವಿಧದಲ್ಲಿ ಸನ್ಮಾನಿಸಲಿಲ್ಲ ತಂದೆಯಾದ, ಅರಸನ ಬಳಿಯಲ್ಲಿ ಏನನ್ನಾದರು ಪಡಕೊಳ್ಳುವದಕ್ಕೆ ಮಾತ್ರ ಅವನನ್ನು ಸೀಮಿತ ಮಾಡಿದ್ದನು. ನೀವು ಯಾವಾಗ ಗ್ರಹಿಕೆ ಇಲ್ಲದ ತಂದೆಯಾಗಿರುತ್ತೀರೋ ಆಗ ಜನರು ನಿಮ್ಮನ್ನು ಉಪಯೋಗಿಸಲು ಸಾಧ್ಯವಾಗುತ್ತದೆ. ಗ್ರಹಿಕೆ ಇಲ್ಲದ ತಂದೆಯವರು ಅಪರಾದ ಮನೋಭಾವವುಳ್ಳವರಾಗಿದ್ದರೂ, ತಮ್ಮ ಮಕ್ಕಳು ಅವರನ್ನು ಇಷ್ಟಪಡಬೇಕೆಂದು ಆಶಿಸುತ್ತಾರೆ; ಆದರೆ ಅವರು ತಮ್ಮ ಮಕ್ಕಳ ಕೈಚಳಕಕ್ಕೆ ವಶವಾಗಲು ಸಿದ್ಧರಾಗಿರುತ್ತಾರೆ.

ದಾವೀದನು ಅಮ್ನೋನನ ಮನವಿಯನ್ನು ಸ್ವೀಕರಿಸಿ, ತಾಮಾರಳು ಅವನ ಮನೆಗೆ ಹೋಗಿ ಬೋಜನವನ್ನು ಸಿದ್ಧಪಡಿಸಲು ಅನುಮತಿಯನ್ನು ನೀಡಿದನು. ಹೇಗೂ ಆಕೆ ಆಹಾರವನ್ನು ಸಿದ್ಧಪಡಿಸಿದಳು,[11] ಆದರೆ ಅವನು ಊಟ ಮಾಡಲು ನಿರಾಕರಿಸಿದನು. ಅಲ್ಲಿಂದಂತ ಎಲ್ಲಾ ಜನರನ್ನು ತನ್ನ ಬಳಿಯಿಂದ ಹೊರಡಿಸಬೇಕೆಂದು ಅಪ್ಪಣೆ ಮಾಡಿದನು. ಎಲ್ಲರೂ ಹೋದ ಮೇಲೆ ಅವನು ತಾಮಾರಳಿಗೆ - ಆಹಾರವನ್ನು ಈ ಕೋಣೆಗೆ ತೆಗೆದುಕೊಂಡು ಬಾ; ನೀನಾಗಿ ತಂದುಕೊಟ್ಟರೆ ಊಟ ಮಾಡುತ್ತೇನೆ ಅಂದನು. ಆಕೆ ಅದನ್ನು ಮಾಡಿದಾಗ ಕೂಡಲೆ ಅವನು ಆಕೆಯನ್ನು ಹಿಡಿದು, "ನನ್ನ ತಂಗಿಯೇ ಬಂದು ನನ್ನ ಸಂಗಡ ಮಲಗಿಕೋ ಅಂದನು" (13:11). ಆಗ ಆಕೆಯು ಭಯಪಟ್ಟು ಅಣ್ಣನೇ ಬೇಡ, ನನ್ನನ್ನು ಕೆಡಿಸಬೇಡ, ನಿನ್ನ ದುರಾಶೆಯನ್ನು ಹತೋಟಿಯಲ್ಲಿಡು ಎಂದು ಬೇಡಿಕೊಂಡಳು.[12] "ಆದರೆ ಅವನು ಆಕೆಯ ಮಾತನ್ನು ಕೇಳದೆ ಬಲಾತ್ಕಾರದಿಂದ ಆಕೆಯನ್ನು ಕೆಡಿಸಿದನು" (13:14). "ಅವನು ಆಕೆಯ ಮೇಲೆ ಬಲಾತ್ಕಾರದ ಅತ್ಯಾಚಾರವನ್ನು ನಡಿಸಿದನು" (NIV); "ಆತನು ತನ್ನ ತಂಗಿಯನ್ನೇ ಕೆಡಿಸಿದನು."

"ಇದಾದ ಮೇಲೆ ಅವನಿಗೆ ಆಕೆಯಲ್ಲಿ ತುಂಬಾ ದ್ವೇಷಹುಟ್ಟಿತು; ಅವನು ಎಷ್ಟಾಗಿ ಪ್ರೀತಿಸಿದ್ದನೋ, ಅದಕ್ಕಿಂತ ಹೆಚ್ಚಾಗಿ, ಅವಳನ್ನು ದ್ವೇಷಿಸಿದನು. ಅಮ್ನೋನನು - ಅವಳಿಗೆ ಎದ್ದು ಹೋಗು ಎಂದು ಹೇಳಿದನು!" (13:15). ಯೌವನಸ್ಥೆಯರೇ ಈ ವಿಷಯವನ್ನು ಕೇಳಿರಿ, ಅವುಗಳನ್ನು ಹೃದಯಕ್ಕೆ ತೆಗೆದುಕೊಳ್ಳಿರಿ. ಕೆಲವು ವಿಧವಾದ ಮನುಷ್ಯರು "ಪ್ರೀತಿಯ" ಕುರಿತು ಮಾತಾಡಿ, ಅವರೊಂದಿಗೆ ನಿಮ್ಮನ್ನು ಕಾಮಾಭಿಲಾಶೆಗೆ ಸೆಳೆದು ಕೊಳ್ಳುತ್ತಾರೆ. ಅವರು ತಮ್ಮ ದುರಾಶೆಯನ್ನು ತೀರಿಸಿಕೊಂಡ ನಂತರ, ನಿಮ್ಮನ್ನು ದ್ವೇಷಿಸುತ್ತಾರೆ. ಮದುವೆಯ ಸಂಬಂಧದಲ್ಲಿ ನಡೆಯುವ, ಲೈಂಗೀಕ ಕ್ರಿಯೆಯು ಬಹು ಸುಂದರವಾದದ್ದು (ಆದಿಕಾಂಡ

2:23-25; ಇಬ್ರಿಯ 13:4); ದಾಂಪತ್ಯದ ಸಂಬಂಧಕ್ಕೆ, ಇಲ್ಲದೆ ಹೋದರೆ ಅದು ಅಸಹ್ಯವಾದದ್ದು ಎಂದು ಅರ್ಥ.

ತಾಮಾರಳು ಅವನ ಕಾಲಿಗೆ ಬಿದ್ದು, ಹಾಗೆ ಮಾಡಬೇಡ, ನನ್ನನ್ನು ಹೊರಡಿಸಿ ಬಿಡಬೇಡ, ಎಂದು ಅಂಗಲಾಚಿದಳು. ಆದರೆ ಅವನು ಅವಳ ಮಾತನ್ನು ಕೇಳದೆ, ತನ್ನ ಆಳಿಗೆ "ಇವಳನ್ನು ಹೊರಗೆ ತಳ್ಳಿ ಕದ ಮುಚ್ಚು ಎಂದು ಆಜ್ಞಾಪಿಸಿದನು." [ಈಗ ಆಕೆಯನ್ನು, "ತಾಮಾರೆ ಳೆಂದಾಗಲೀ," "ತಂಗಿ," ಎಂದಾಗಲೀ ಹೇಳದೆ "ಸ್ತ್ರೀ" ಅಥವಾ "ಅವಳು" ಎಂದು ಕರೆದನು] "ನನ್ನ ಸನ್ನಿಧಿಯಿಂದ ಅವಳನ್ನು ದೂರ ಮಾಡಿ ಕದ ಮುಚ್ಚು ಅಂದನು" (13:17). ತನ್ನ ಕನ್ಯತ್ವವು ನಾಶವಾಯಿತು ಎಂದು ಸೂಚಿಸುವಂತೆ, ತಾಮಾರಳು ತನ್ನ ಬಟ್ಟೆಯನ್ನು ಹರಿದುಕೊಂಡವಳಾಗಿ,[13] ಕಣ್ಣೀರಿನ, ಪ್ರವಾಹವನ್ನು ಸುರಿಸುತ್ತಾ ಹೊರಟು ಹೋದಳು.[14]

"ಅಮ್ನೋನನೇ, ನೀನು ರಾಜಪುತ್ರನಾಗಿರುವದರಿಂದ, ನೀನು ಈ ಯೋಜನೆಯನ್ನು ಮಾಡಿ, ನಿನಗೆ ಇಷ್ಟವಾದ ಸ್ತ್ರೀಯರನ್ನು ಪಡೆದುಕೊಳ್ಳ ಬಹುದೋ? ದುರಾಶೆಯನ್ನು ಹತೋಟಿಗೆ ತಾರದೆ, ಅದನ್ನು ತೃಪ್ತಿಪಡಿಸಬೇಕು ಎಂಬ ಯೋಜನೆಯು ನಿನಗೆ ಎಲ್ಲಿಂದ ದೊರಕಿತು?" ಅಮ್ನೋನನು ನಗುತ್ತಾ ಉತ್ತರಿಸಬಹುದು, "ನಾನು ಇದನ್ನು ನನ್ನ ತಂದೆಯಿಂದ ಕಲಿತುಕೊಂಡೆ." ತಂದೆಯಂತೆ, ಮಗನು.

ಕತ್ತಿಯು ದಾವೀದನ ಮನೆಯನ್ನು ಬಿಟ್ಟು ಹೋಗುವದಿಲ್ಲ.

ದಾವೀದನು ಈ ಹೊಲಸಾದ ಸುದ್ದಿಯನ್ನು ತಿಳಿದಾಗ ಅವನು ಏನು ಮಾಡಿದನು? 13:21ನ್ನು ದೃಷ್ಟಿಸಿರಿ: "ಅರಸನಾದ ದಾವೀದನು ಈ ಸಂಗತಿಯನ್ನು ಕೇಳಿ ಬಹಳವಾಗಿ ಕೋಪ ಗೊಂಡನು."[15] ಅವನು ಅಮ್ನೋನನನ್ನು ಶಿಕ್ಷಿಸಲಿಲ್ಲ; ತಾಮಾರಳನ್ನು ಸಂತೈಸಲಿಲ್ಲ; ಅವನು ಎಲ್ಲರನ್ನು ಒಟ್ಟಾಗಿ ಸೇರಿಸಿ ಸಮಸ್ಯೆಯನ್ನು ಪರಿಹರಿಸಲಿಲ್ಲ. ಅವನು ಕೋಪ ಗೊಂಡನಷ್ಟೆ ದಾವೀದನ ಪುಸ್ತಕದಿಂದಲೇ ಒಂದು ಪುಟವನ್ನು, ಅಮ್ನೋನನು ನೆರವೇರಿಸಿದಾಗ, ದಾವೀದನು ಹೇಗೆ ಅವನನ್ನು ಶಿಕ್ಷಿಸಲು ಸಾಧ್ಯ?

"ಮನುಷ್ಯನು ಏನು ಬಿತ್ತುತ್ತಾನೋ, ಅದನ್ನೇ ಅವನು ಕೊಯ್ಯುವನು" - ಪಾಪ ಕ್ಷಮಾಪಣೆ ಇದ್ದರೂ ಸಹ.

**ಪ್ರತಿಕಾರ (13:20-36)**

ತಾಮಾರಳ, ಸ್ವಂತ ಅಣ್ಣನಾದ, ಅಬ್ಷಾಲೋಮನು, ಈ ವಿಷಯವನ್ನು ತಿಳಿದು ಕೊಂಡಾಗ, ಹೇಗೂ ಅಮ್ನೋನನು ಶಿಕ್ಷೆಯಿಂದ ತಪ್ಪಿಸಿಕೊಳ್ಳಬಾರದು ಎಂದು ತೀರ್ಮಾನ ಮಾಡಿದನು. ಅಬ್ಷಾಲೋಮನು, ತಾಮಾರಳಿಗೆ, "ನಿನ್ನ ಅಣ್ಣನಾದ ಅಮ್ನೋನನು ನಿನ್ನನ್ನು ಕೂಡಿದನೇನು?" ಅಂದನು. ಯಾಕೆ ಅಬ್ಷಾಲೋಮನು, ಅಮ್ನೋನನ್ನು ಸಂದೇಹಿಸಿದನು? ಅಮ್ನೋನನ ಕಣ್ಣಿನಲ್ಲಿ ದುರಾಶೆಯನ್ನು ಕಂಡಿದ್ದನೋ? ಅಥವಾ ಗಾಳಿಸುದ್ದಿಯನ್ನು ಕೇಳಿದನೋ? ಆದರೆ ತಾಮಾರಳು, ಮಾತನಾಡಲಾರದೆ, ಅಳುತ್ತಾ, ತನ್ನ ತಲೆಯನ್ನು ಅಲ್ಲಾಡಿಸಿದಳು. ಅದಕ್ಕೆ ಅಬ್ಷಾಲೋಮನು, "ನನ್ನ ತಂಗಿಯೇ, ಈಗ ಸುಮ್ಮನಿರು" (13:20). ತಾಮಾರಳ, ಅವಮಾನವು ಅಬ್ಷಾಲೋಮನ ಮನೆಯಲ್ಲಿ ಏಕಾಂತತೆಯನ್ನು ನಿರ್ಮಿಸಿತ್ತು.

"ಅಬ್ಷಾಲೋಮನು ಅಮ್ನೋನನ ಸಂಗಡ ಒಳ್ಳೇ ಮಾತನ್ನಾಗಲಿ ಕೆಟ್ಟ ಮಾತನ್ನಾಗಲಿ ಆಡಲಿಲ್ಲ" (13:22). ಅಬ್ಷಾಲೋಮನು, ಅಮ್ನೋನನ ಸಂಗಡ ಎರಡು ವರ್ಷಗಳ ಕಾಲ ಮಾತನಾಡಲಿಲ್ಲ. ಅವರು ಒಂದೇ ಮೇಜಿನಲ್ಲಿ ಊಟ ಮಾಡುತ್ತಿದ್ದರು. ಅವನು ಅವನ ಬಳಿಯಲ್ಲಿಯೇ, ಸುಳಿದಾಡುತ್ತಿದ್ದರೂ, ಅಮ್ನೋನನು ಇರುವಿಕೆಯೇ ಇಲ್ಲವೆಂಬಂತೆ ಅಬ್ಷಾಲೋಮನು ನಟಿಸುತ್ತಿದ್ದನು. ಅದು ಒಂದು ಮಾತಿನ ಸಂಪರ್ಕವೇ ಇಲ್ಲದಂತ ಮನೆಯಾಗಿತ್ತು. ದಾವೀದನು ತನ್ನ ಮಕ್ಕಳೊಂದಿಗೆ ಮಾತನಾಡಲಿಲ್ಲ; ಅವನ ಮಕ್ಕಳೆಲ್ಲರು ಒಬ್ಬರಿಗೊಬ್ಬರು ಮಾತನಾಡಲಿಲ್ಲ *"ಎರಡು ಸಂಪೂರ್ಣ ವರ್ಷಗಳ"* ಕಾಲ ಅಲ್ಲಿ ಮಾತಿನ ಸಂಪರ್ಕವೇ

ಇರಲಿಲ್ಲ (13:23; ಒತ್ತಿ ಹೇಳಿದ್ದು ನನ್ನದು)

ದಿನದಿಂದ ದಿನಕ್ಕೆ ತನ್ನ ಸುಂದರವಾದ ಸಹೋದರಿಯು, ಬಳಲಿ ಬಲಹೀನವಾಗುತ್ತಿದ್ದನ್ನು ಅಬ್ಷಾಲೋಮನು ನೋಡಿ, ಅವನ ಹೃದಯದಲ್ಲಿಯೂ, ಅವನ ಆತ್ಮದಲ್ಲಿಯೂ, ದ್ವೇಷ ಹೆಚ್ಚಾಗುತ್ತಿತ್ತು (2 ಸಮುವೇಲ 13:32 ಗಮನಿಸಿ). ಆಗ ಅಬ್ಷಾಲೋಮನ ಮನಸ್ಸಿನಲ್ಲಿ ಪ್ರತೀಕಾರದ ಯೋಜನೆ ಸೃಷ್ಟಿಯಾಯಿತು. ಎರಡು ವರುಷಗಳಾದ ನಂತರ "ಅಬ್ಷಾಲೋಮನು ಒಂದು ದಿನ ಎಫ್ರಾಯೀಮಿನ ಬಳಿಯಲ್ಲಿರುವ ಬಾಳ್ ಹಾಚೋರಿನಲ್ಲಿ,[16] ಕುರಿಗಳ ಉಣ್ಣೆಯನ್ನು ಕತ್ತರಿಸುವಾಗ ಎಲ್ಲಾ ರಾಜಪುತ್ರರನ್ನು ಔತಣಕ್ಕೆ ಕರೆದನು" (13:23). ಕುರಿ ಉಣ್ಣೆ ಕತ್ತರಿಸುವ ಸಮಯವು ಹಬ್ಬದ ಸಮಯವಾಗಿತ್ತು.[17] - ಆ ಜಾತಣಕ್ಕೆ ಅಬ್ಷಾಲೋಮನು ತನ್ನ ಸಹೋದರರನ್ನು ಆಹ್ವಾನಿಸಿದನು.[18] ಅಮ್ನೋನನನ್ನು ಈ ಕೂಟದಲ್ಲಿ ಕಾಣುವುದು ಆಸಕ್ತಿಕರವಾಗಿದೆ. ಆದರೆ ಅಮ್ನೋನನು ಅವನ ಆಹ್ವಾನವನ್ನು ಸ್ವೀಕರಿಸಲಿಲ್ಲದೇ ಹೋದದ್ದರಿಂದ, ಅಬ್ಷಾಲೋಮನು ಅವನನ್ನು ಕಳಿಸುವಂತೆ ದಾವೀದನನ್ನು ಪ್ರೇರಿಸಿದನು.

ಅಬ್ಷಾಲೋಮನು, ದಾವೀದನನ್ನು ಸಹ ಜಾತಣಕ್ಕೆ ಆಹ್ವಾನಿಸಿದನು. ದಾವೀದನು ಅವನ ಆಹ್ವಾನಕ್ಕೆ ಸಮ್ಮತಿಸದೆ ಹೋದಾಗ (ಈತನು ಈ ರೀತಿ ಮಾಡುವನೆಂದು ಅಬ್ಷಾಲೋಮನು ತಿಳಿದಿದ್ದನು), ಅಬ್ಷಾಲೋಮನು, "ನಿನ್ನ ಪರವಾಗಿ ರಾಜ ಪುತ್ರನಾದ ಅಮ್ನೋನನನ್ನು ಕಳುಹಿಸು ಅಂದನು." ದಾವೀದನು ಮೊದಲು ಇದನ್ನು ಸಮ್ಮತಿಸಲಿಲ್ಲ (ಅವನಿಗೆ ಸಂದೇಹವಿತ್ತೋ?), ಆದರೆ ಅಬ್ಷಾಲೋಮನು ಒತ್ತಾಯ ಮಾಡಲು[19] (ಗೌರವಯುತವಾದ ಕೈಚಳಕದ ತಂತ್ರ). ಕೊನೆಯದಾಗಿ, ಅಮ್ನೋನನನ್ನು ಔತಣಕ್ಕೆ ಹೋಗಲು ದಾವೀದನು ಅನುಮತಿಸಿದನು.

ಔತಣವು ಪ್ರಾರಂಭವಾದಾಗ, ಅಬ್ಷಾಲೋಮನು ಅಮ್ನೋನನನ್ನು ಕುಡಿದು ಮತ್ತನಾಗುವಂತೆ ಮಾಡಿದನು. ನಂತರ ತನ್ನ ಆಳುಗಳಿಗೆ ಅವನನ್ನು ಕೊಲ್ಲುವಂತೆ ಆದೇಶ ಮಾಡಿದನು. ತಕ್ಷಣವೇ ಕಿರೀಟಧಾರಣೆ ಮಾಡಬೇಕಾದ ರಾಜಕುಮಾರನು ರಕ್ತದ ಮಡುವಿನಲ್ಲಿ ನೆಲದ ಮೇಲೆ ಬಿದಿದ್ದನು. ಉಳಿದ ರಾಜಕುಮಾರರು ಜೀವಕ್ಕೆ ಭಯಪಟ್ಟು ಪಲಾಯನ,[20] ಮಾಡಿದರು.

"ಅಬ್ಷಾಲೋಮನೇ, ಇನ್ನೋಬ್ಬನನ್ನು ಕುಡಿದು ಮತ್ತನನ್ನಾಗಿ ಮಾಡಿ, ಅವನನ್ನು ಆಯುಧರಹಿತನನ್ನಾಗಿ ಮಾಡುವಂತ ತಂತ್ರವನ್ನು ಎಲ್ಲಿಂದ ಕಲಿತು ಕೊಂಡಿ? ಇನ್ನೊಬ್ಬರು ನಿನ್ನ ಪರವಾಗಿ ಕೊಲ್ಲುವಂತ ಯೋಜನೆಯನ್ನು ಎಲ್ಲಿಂದ ಕಲಿತುಕೊಂಡಿ?" ಅಬ್ಷಾಲೋಮನು ನಗುತ್ತಾ ಉತ್ತರಿಸುವದೇನೆಂದರೆ, ಇದನ್ನು "ನನ್ನ ತಂದೆಯಿಂದ ಕಲತುಕೊಂಡೆ." ತಂದೆಯಂತೆಯೇ, ಮಗನು.

ಕತ್ತಿಯು ದಾವೀದನ ಮನೆಯನ್ನು ಬಿಟ್ಟು ಹೋಗಲಿಲ್ಲ.[21]

### ಓಡಿ ಹೋಗುವಿಕೆ (13:37-14:33)

"ಈಗ ಅಬ್ಷಾಲೋಮನು ತಪ್ಪಿಸಿಕೊಂಡು ಗೆಷೂರಿಗೆ ಓಡಿಹೋಗಿ ಅಲ್ಲಿನ ಅರಸನೂ ಅಮ್ಮೀಹೂದನ ಮಗನೂ ಆದ ತಲ್ಮೈಯ ಬಳಿಯಲ್ಲಿದ್ದನು" (13:37). ತಲ್ಮೈ, ನೆನಪಿದೆಯೋ? ಅವನ ಕುರಿತಾಗಿ ಅಧ್ಯಾಯ 3ರಲ್ಲಿ ಓದುತ್ತೇವೆ. ಇವನು ಅಬ್ಷಾಲೋಮನ ತಾಯಿಯ ತಂದೆ. ಅಬ್ಷಾಲೋಮನು ತಾಯಿಯ ಕಡೆಯಿಂದ ಸಂಬಂಧ ಪಡುವ ಅವನ ಅಜ್ಜನ ಬಳಿಗೆ ಓಡಿ ಹೋದನು. ಅವನು ಗೆಷೂರಿನ ಅರಸನಾಗಿದ್ದನು. ಬಹುಶ ಅಬ್ಷಾಲೋಮನು ಅಜ್ಜನ ಬಳಿಯಲ್ಲಿ ವಿಶೇಷ ಸಂಬಂಧವನ್ನು ಹೊಂದಿದ್ದನು. ಬಹುಶ ಅವನು ಬಲವಾದ ತಂದೆಯನ್ನು ಹೊಂದಲು ಆಶಿಸಿದ್ದನು. ಬಹುಶ ಅವನು ಯೆರುಸಲೇಮಿನಿಂದ ಸಾಧ್ಯವಾದಷ್ಟು ದೂರ ಇರಲು ಇಚ್ಛಿಸಿದನು (ಗೆಷೂರೂ ದೂರದ ಉತ್ತರದಲ್ಲಿತ್ತು[22]).

ಮೂರು ವರ್ಷಗಳು ಕಳೆದವು - ಮೂರು ಉದ್ದವಾದ ವರುಷಗಳು. ದಾವೀದನ ಹೃದಯದಿಂದ, ವೇದನೆಯು ನಿಧಾನವಾಗಿ ಕಡಿಮೆಯಾಗುತ್ತಾ ಬಂತು "ಅರಸನಾದ ದಾವೀ

ದನು ಅಮ್ನೋನನ ಮರಣದ ವಿಷಯ ಆದರೆಣೆಹೊಂದಿ" (13:39ಎ). "ತನ್ನ ಮಗನಾದ ಅಬ್ಷಾಲೋಮನನ್ನು ತಿರುಗಿ ನೋಡುವದಕ್ಕೆ ಬಹಳ ಆತುರ ಪಟ್ಟನು" (13:39ಬಿ). ಯಾಕೆ ದಾವೀದನು ಹೋಗಲಿಲ್ಲ? ಅವನ ಹೃದಯದಲ್ಲಿ ಅಬ್ಷಾಲೋಮನಿಗೆ ವಿಶೇಷ ಸ್ಥಾನವಿತ್ತು.[23] ಈಗ ಅಮ್ನೋನನು ಮರಣ ಹೊಂದಿದ್ದನು. ಅಬ್ಷಾಲೋಮನು ಅವನ ಮೊದಲ ಮಗನಾಗಿದ್ದನು.[24] ಯಾಕೆ ದಾವೀದನು ಅವನೊಂದಿಗೆ ಹೊಂದಾಣಿಕೆಯ ಕಾರ್ಯವನ್ನು ಮಾಡಲಿಲ್ಲ?

ನಾವು ಮೊದಲು ನೋಡಿದ್ದಕ್ಕಿಂತಲೂ, ಈಗ ದಾವೀದನು ವಯಸ್ಸಾದವನಾಗಿದ್ದನು. ಆದರೆ ಅವನು "ನಾನು ಅರಸನು ನನ್ನದೇ ಆದ ಗೌರವವಿದೆ. ನಾನು ಅದನ್ನು ಮಾಡಲಾಗದು" ಎಂದು ತಲೆಯನ್ನು ಮಾತ್ರ ಅಲ್ಲಾಡಿಸುತ್ತಿದ್ದನು.

ಆದುದರಿಂದ, ಅಲ್ಲಿ ಏನೂ ನಡೆಯುತ್ತಿರಲಿಲ್ಲ.

ಅಧ್ಯಾಯ 14ರಲ್ಲಿ ಯೋವಾಬನು ದಾವೀದನನ್ನು ಅವಮಾನ ಪಡಿಸಲು ಅಬ್ಷಾಲೋಮನನ್ನು ಯೆರುಸಲೇಮಿಗೆ ಕರೆತರುವ ತಂತ್ರವನ್ನು ನಿರ್ಮಿಸಿದನು.[25] ನಾತಾನನ ತಂತ್ರವನ್ನೇ ಉಪಯೋಗಿಸಿ, ಒಬ್ಬ ಸ್ತ್ರೀಯು ದಾವೀದನ ಬಳಿಬಂದು,[26] ಒಂದು ಕಥೆಯನ್ನು ಹೇಳುವಂಥ ಸಂದರ್ಭವನ್ನು ಮಾಡಿದನು. ಅಬ್ಷಾಲೋಮನು, ಅಮ್ನೋನನನ್ನು ಕೊಂದು ಹಾಕಿದ ಕುರಿತ ಕಥೆಯನ್ನು ಆ ಸ್ತ್ರೀಯು ವಿವರಿಸಿದಳು.[27] ಇದರಿಂದ ಕ್ಷಮಾಪಣೆ ಹೊಂದಿದ ದಾವೀದನು, ಸಹೋದರರನನ್ನು ಕೊಂದು ಹಾಕಿದವನನ್ನು ಕ್ಷಮಿಸಿದನು. ಆಗ ಆ ಸ್ತ್ರೀಯು "ನಾನು ಅಬ್ಷಾಲೋಮನ ಕುರಿತಾಗಿ ಮಾತನಾಡುತ್ತಿದ್ದೇನೆ ಅಂದಳು ಎಲ್ಲಾ ಇಸ್ರಾಯೇಲ್ಯರು ಅವನಿಗಾಗಿ ಹಾತೊರೆಯುತ್ತಿದ್ದಾರೆ. ಆದುದರಿಂದ ಯಾಕೆ ನೀನು ಅವನನ್ನು ಕ್ಷಮಿಸಿ ಮನೆಗೆ ಪುನ ಕರಕೊಂಡು ಬರ ಬಾರದು?"

ನಡುಗುತ್ತಿದ್ದ ದಾವೀದನು ಯೋವಾಬನಿಗೆ, "ನೀನು ಕೇಳಿ, ಕೊಂಡದ್ದನ್ನು ಅನುಗ್ರಹಿಸಿದ್ದೇನೆ; ಹೋಗಿ ಯೌವನಸ್ಥನಾದ ಅಬ್ಷಾಲೋಮನನ್ನು ಕರಕೊಂಡು ಬಾ ಅಂದನು" (14:21). "ಆಗ ಯೋವಾಬನು ಎದ್ದು ಗೆಷೂರಿಗೆ ಹೋಗಿ ಅಬ್ಷಾಲೋಮನನ್ನು ಯೆರುಸಲೇಮಿಗೆ ಕರಕೊಂಡು ಬಂದನು" (14:23).

ಹೇಗೂ, ದಾವೀದನು ನೀಡಿದ ಮನನೊಂದ ಸಲಹೆಯನ್ನು ಗಮನಿಸಿರಿ: "ಆದರೆ ಅರಸನು ಅಬ್ಷಾಲೋಮನು ತನ್ನ ಮನೆಗೆ ಹೋಗಲಿ; ಅವನು ನನ್ನ ಮುಖವನ್ನು ನೋಡಬಾರದು ಎಂದು ಆಜ್ಞಾಪಿಸಿದನು" (14:24). ಈ ಮಗನಿಗಾಗಿ ದಾವೀದನು ಆತುರಪಡುತ್ತಿದ್ದನು (2 ಸಮುವೇಲ 13:39). ಅರಸನು, ಅಬ್ಷಾಲೋಮನಿಗಾಗಿ "ಹಿಂಬಲಿಸುತ್ತಿದ್ದನು" (2 ಸಮುವೇಲ 14:1). ಈ ಮಗನನ್ನು ದಾವೀದನು ವಿಶೇಷವಾದ ಅನುರಾಗದಿಂದ ಪ್ರೀತಿಸುತ್ತಿದ್ದನು (2 ಸಮುವೇಲ 18:5, 33; ಹೋಲಿಸು. 19:60). ಆದಾಗ್ಯು "ಅವನನ್ನು ಕರೆ ತನ್ನಿ ಆದರೆ ಅವನು ನನ್ನ ಮುಖವನ್ನು ನೋಡ ಬಾರದು." ತಪ್ಪಿ ಹೋದ ಮಗನು ತಿರುಗಿ ಮನೆಗೆ ಬಂದಾಗ ಅವನ ತಂದೆಗೂ ಮತ್ತು ದಾವೀದನಿಗೂ ಇರುವ ವ್ಯತ್ಯಾಸವನ್ನು ಗಮನಿಸಿ: "ಅವನು ಇನ್ನೂ ದೂರದಲ್ಲಿರುವಾಗ ಅವನ ತಂದೆಯು ಅವನನ್ನು ಕಂಡು ಕನಿಕರ ಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು" (ಲೂಕ 15:20). ಆದರೆ ದಾವೀದನು, "ಅವನು ತನ್ನ ಮನೆಗೆ ಹಿಂತಿರುಗಲಿ, ಅವನು ನನ್ನ ಮುಖವನ್ನು ನೋಡದೆ ಅಲ್ಲೆ ಇರಲಿ ಎಂದು ಹೇಳಿದನು."

ಧರ್ಮಶಾಸ್ತ್ರದ ಪ್ರಕಾರ ದಾವೀದನು ಅಬ್ಷಾಲೋಮನು ಮಾಡಿದ ಕೊಲೆಯ ಕಾರ್ಯದ ನಿಮಿತ್ತ ಅವನನ್ನು ಕಲ್ಲೆಸೆದು ಕೊಲ್ಲಬೇಕಿತ್ತು, ಆದರೆ ದಾವೀದನು, ಸ್ವತ ಈ ಅಪ್ಪಣೆಗೆ ಒಳಗಾಗಿದ್ದರಿಂದ, ಈ ಕಾರ್ಯವನ್ನು ಅವನು ನೆರವೇರಿಸಲು ಸಾಧ್ಯವಾಗಲಿಲ್ಲ. ಇನ್ನೊಂದೆಡೆ ದಾವೀದನು ಅವನನ್ನು ಕೊಲ್ಲದೆ, ಅವನನ್ನು ಕ್ಷಮಿಸಿ, ಅರಮನೆಯ ಎಲ್ಲಾ ಅನುಕೂಲತೆಗಳಿಗೆ ಅವನಿಗೆ ಅವಕಾಶ ಮಾಡಿಕೊಡಬೇಕಿತ್ತು.[28] ದಾವೀದನು ಇದನ್ನು ಸಹ ಮಾಡಲಿಲ್ಲ, ಅವನು

ಏನನ್ನೂ ಮಾಡಲಿಲ್ಲ.

"ಅಬ್ಷಾಲೋಮನು ಅರಸನ ಮುಖಯನ್ನು ನೋಡದೆ ಎರಡು ವರುಷ ಯೆರೂಸಲೇಮಿನಲ್ಲಿಯೇ ಇದ್ದನು" (14:28). ಅಬ್ಷಾಲೋಮನು ಅವನ ಅಜ್ಜನ ಜೊತೆಯಲ್ಲಿ ಮೂರು ವರುಷಗಳ ಕಾಲ ವಾಸವಾಗಿದ್ದನು. ಈಗ ಮನೆಯಲ್ಲಿ ಎರಡು ವರ್ಷಗಳ ಕಾಲ ಏಕಾಂಗಿಯಾಗಿದ್ದನು. ಒಟ್ಟು ಐದು ವರ್ಷಗಳ ಕಾಲ ಅವನು ತನ್ನ ತಂದೆಯ ಮುಖವನ್ನು ನೋಡದೆ ಇದ್ದನು!

ಅಬ್ಷಾಲೋಮನು ಈ ಪರಿಸ್ಥಿತಿಯನ್ನು ಬದಲಾಯಿಸಲು ಮುಂದಾದನು. "ನನ್ನೊಂದಿಗೆ - ಹೋರಾಡು - ಅಥವಾ - ವ್ಯವಹಾರ ಮಾಡು"[29] ಎಂದು ಒತ್ತಡ ತಂದನು. ಯೋವಾಬನೇ ಅದರ ಮಧ್ಯದಲ್ಲಿ ಸಂಧಾನಕಾರನಾಗಬೇಕೆಂದು ಬಯಸಿದನು, ಆದರೆ ಯೋವಾಬನು ಇದನ್ನು ಲೆಕ್ಕಕ್ಕೆ ತರಲಿಲ್ಲ.[30] ಅವನ ಆಸಕ್ತಿಯು ಅಬ್ಷಾಲೋಮನ ಕಡೆಗೆ ಬರುವಂತೆ, ಅವನು ಯೋವಾಬನ ಜವೆಗೋದಿಯ ಹೊಲಕ್ಕೆ ತನ್ನ ಸೇವಕರ ಮೂಲಕ ಬೆಂಕಿಯನ್ನು ಹಚ್ಚಿಸಿದನು![31] ನಂತರ ಯೋವಾಬನು ಅಬ್ಷಾಲೋಮನ ಪರವಾಗಿ, ದಾವೀದನ ಬಳಿಗೆ ಹೋದನು. ಐದು ವರ್ಷಗಳ ನಂತರ, ದಾವೀದನು, ತನ್ನ ಮಗನನ್ನು ಕರೆದನು, ಕೊನೆಯದಾಗಿ ಎಲ್ಲವನ್ನು ಬಹಿರಂಗವಾಗಿ ತರ್ಕಮಾಡಲು ಅವರಿಗೆ ಅವಕಾಶವು ದೊರೆಯಿತು. ಕೊನೆಯದಾಗಿ ಮಾತನಾಡಿದರು. ಕೊನೆಯದಾಗಿ ಸಮಸ್ಯೆಗಳಿಗೆ ಅಂತ್ಯವಾಯಿತು. ಕೊನೆಯದಾಗಿ ಸಂಧಾನ ಮಾಡಿಕೊಂಡರು. ಆದಾಗ್ಯೂ 14:33ರ ಅಂತ್ಯದ ಚಿತ್ರವನ್ನು ಗಮನಿಸಿ: "ಅವನು [ಅಬ್ಷಾಲೋಮನು] ಅರಸನ ಬಳಿಗೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ಅರಸನು ಅವನಿಗೆ ಮುದ್ದಿಟ್ಟನು." ಈ ದೃಷ್ಯವು ನಿಮಗೆ ಏನನ್ನು ತಿಳಿಸುತ್ತದೆ, ಎಂದು ನನಗೆ ತಿಳಿದಿರುವದಿಲ್ಲ. ಆದರೆ ಮುದ್ದಿಡುವಂಥದ್ದು ಸಾಮಾನ್ಯವಾಗಿ ವಂದನೆಗೆ ಸೂಚನೆಯಾಗಿರುತ್ತದೆ. ಆದರೆ ಅದು ತಣ್ಣಗಾಗಿತ್ತು, ಅತಿ ತಣ್ಣಗಾಗಿತ್ತು ಎಂದು ನಾನು ತಿಳಿದಿದ್ದೇನೆ.

ಈ ದಿವಸಗಳ ಪದ್ಧತಿಯಂತೆ ನೋಡುವದಾದರೆ: ಒಬ್ಬ ಹುಡುಗನು ತನ್ನ ತಂದೆಯೊಂದಿಗೆ ಮಾತನಾಡಲು ತಿಂಗಳುಗಟ್ಟಲೆ ಕಾದಿರುತ್ತಾನೆ. ಕೊನೆಯದಾಗಿ, ಎಲ್ಲರೂ ಸೇರುವಂಥ ಕೊಠಡಿಯಲ್ಲಿ ತನ್ನ ತಂದೆಯ ಮುಂದೆ ನಿಂತು ಅವನ ಕಾಲಿಗೆ ಬಿದ್ದು, ಅವನ ತಂದೆಯ ಮುಖವನ್ನು ಸಹ ನೋಡದೆ. "ಅಪ್ಪ ನನ್ನನ್ನು ಮನ್ನಿಸು ಎಂದು ಹೇಳುತ್ತಾನೆ." ನಂತರ ತಂದೆಯು ಕ್ಷಣಕಾಲ ಯೋಚಿಸಿ ನಂತರ "ಸರಿ ... ಮಗನೆ ಇನ್ನು ಮುಂದೆ ತಿರುಗಿ ಇದನ್ನು ಮಾಡಬೇಡ," ಎಂದು ಹೇಳುತ್ತಾನೆ.

ಈ ವಿಷಯವನ್ನು ಪರಿಗ್ರಹಿಸೋಣ. ಆದರೂ, ದಾವೀದನಿಗೂ, ಅವನ ಮಗನಿಗೂ ಸರಿಯಾದ ಸಂಪರ್ಕವಿರಲಿಲ್ಲ.

**ದಂಗೆ (15:1-16:23)**

ಅಧ್ಯಾಯ 15ರಲ್ಲಿ ಅಬ್ಷಾಲೋಮನ ಹೃದಯದಲ್ಲಿ ಅಡಗಿದ ಅಸಮಾಧಾನವು, ಹೆಚ್ಚುತ್ತಾ ಬಂದಾಗ, ತನ್ನ ತಂದೆಗೆ ವಿರುದ್ಧವಾಗಿ, ಕುತಂತ್ರವನ್ನು ರೂಪಿಸಿದನು. ಅಬ್ಷಾಲೋಮನು ಜನರ ಹೃದಯವನ್ನು ತನ್ನ ಕಡೆಗೆ ಸೆಳೆದುಕೊಳ್ಳಲು,[32] ನಾಲ್ಕು ವರ್ಷಗಳ[33] ಕಾಲಾವಕಾಶವನ್ನು ಉಪಯೋಗಿಸಿ ಕೊಂಡನು. ಅವನು ತನ್ನನ್ನು ತಾನು ಜನರಿಗೆ ಹೆಚ್ಚಾಗಿ ತೋರಿಸಿಕೊಳ್ಳಲು, ರಾಜ ರಥವನ್ನು ಹತ್ತಿ ಇಡೀ ದೇಶವನ್ನು ಸಂಚರಿಸಿದನು.[34] ಐವತ್ತು ಜನರ ಕಾವಲು ದಂಡು ಅವನ ಸುತ್ತಲೂ ಇರುತ್ತಿತ್ತು (ಅವನೇ ಮೆರವಣಿಗೆಯ ಕೇಂದ್ರ ಬಿಂದುವಾಗಿದ್ದನು) ಅರಸನ ಕಣಿವೆಯಲ್ಲಿ ತನ್ನ ಹೆಸರಿಗಾಗಿ ಒಂದು ಕಂಬವನ್ನು,[35] ನಿರ್ಮಿಸಿಕೊಂಡನು.[36] ಪ್ರತೀದಿನ, ಅರಮನೆಯ ಬಾಗಿಲಿನಲ್ಲಿ ಕೂತು ಅರಸನ ಬಳಿಗೆ ನ್ಯಾಯಕ್ಕಾಗಿ ಬರುತ್ತಿದ್ದ ಜನರನ್ನು ತಾನೇ ಆಹ್ವಾನಿಸಿ, ನಾನು ಸಹ ನನ್ನ ತಂದೆಯಂತೆ, ನ್ಯಾಯವಾದಿಯು ಆಗಿರುವದರಿಂದ: "ನನ್ನನ್ನು ಸಹ, ನೀವು ಅಂಗೀಕರಿಸಿರಿ ಎಂಬ ಆಲೋಚನೆಯನ್ನು ಅವರ ಮನಸ್ಸಿನಲ್ಲಿ ಬಿತ್ತಿದನು!"[37]

ಕೊನೆಯದಾಗಿ, ಸಿಂಹಾಸನವನ್ನು ತನಗಾಗಿ ಪಡೆದುಕೊಳ್ಳಲು ಇದು ತಕ್ಕ ಸಮಯವೆಂದು ತಿಳುಕೊಂಡನು. ಇದನ್ನು ಸಾರಿ ಹೇಳಲು, ಹೆಬ್ರೋನು ಸರಿಯಾದ ಸ್ಥಳವೆಂದು ತಿಳಿದನು. ಹೆಬ್ರೋನನ್ನು ಆರಿಸಿಕೊಳ್ಳುವದರಿಂದ ಯಾವ ಅಡಚಣೆಯು ಉಂಟಾಗುತ್ತಿರಲಿಲ್ಲ. ಅದು ಯೆರೂಸಲೇಮಿನಿಂದ ಸ್ವಲ್ಪ ದೂರದಲ್ಲಿತ್ತು. ಆದರೂ ಇಸ್ರಾಯೇಲ್ಯರ ಮನಸ್ಸಿಗೆ ಅದು ವಿಶೇಷ ಸ್ಥಳವಾಗಿತ್ತು. ದಾವೀದನು ಹೆಬ್ರೋನನ್ನು ಬಿಟ್ಟು ಯೆರೂಸಲೇಮನ್ನು ರಾಜಧಾನಿಯನ್ನಾಗಿ ಮಾಡಿ ಕೊಂಡದ್ದರಿಂದ ಅಲ್ಲಿದ್ದವರಿಗೆ ಅಸಮಾಧಾನವಿತ್ತು. ಅದು ಅಬ್ಷಾಲೋಮನ ಹುಟ್ಟಿದ ಊರಾಗಿತ್ತು. ಅವನು ಆ ಊರಿನ ಹುಡುಗನಾಗಿದ್ದನು.

ಅಬ್ಷಾಲೋಮನು ಹೋದಲೆಲ್ಲಾ, ಜನರ ಗುಂಪನ್ನು ಆಕರ್ಷಿಸುತ್ತಿದ್ದರಿಂದ ತನ್ನ ನಿಜವಾದ ನಿಜವಾದ ಆಲೋಚನೆಗಳನ್ನುನ್ನು ಮುಚ್ಚಿ ಹಾಕಲು ಕಾರಣವನ್ನು ಹುಡುಕಿದನು,[38] ಅದೇನೆಂದರೆ, ಅವನು ಅಜ್ಞನ[39] ಮನೆಯಲ್ಲಿರುವಾಗ, ದೇವರಿಗೆ ಮಾಡಿದ ಅರಿಕೆಯನ್ನು ನೆರವೇರಿಸಲು ಹೆಬ್ರೋನಿಗೆ ಹೋಗಬೇಕು ಅಂದನು. ಅಬ್ಷಾಲೋಮನು ಸಿರಿಯದಿಂದ ದಾವೀದನ ಬಳಿಗೆ ಬಂದು ಆರು ವರ್ಷಗಳು ಕಳೆದು ಹೋಗಿದ್ದರಿಂದ ಇದು ಹಳೆಯ ಕಥೆಯಂತಿತ್ತು. ಆದರೆ ದಾವೀದನು ಮೋಸಕ್ಕೊಳಗಾಗಿದ್ದನು.[40] ಅದಕ್ಕೆ ದಾವೀದನು, "ಹೋಗು ನಿನಗೆ ಶುಭವಾಗಲಿ ಅಂದನು" (15:9). ಅವನ ಮಗನೊಂದಿಗೆ ಮಾತನಾಡಿದ ಕಡೇ ಮಾತುಗಳಿವು. ಅಥವಾ ವ್ಯಂಗ್ಯದ ಮಾತಾಗಿತ್ತು. ಅಬ್ಷಾಲೋಮನು ಹೊರಟು ಹೋದ ಮೇಲೆ, ಅವನಿಗಾಗಲೀ ದಾವೀದನಿಗಾಗಲೀ, ಅಥವಾ ಅದರ ಜನಾಂಗಕ್ಕಾಗಲಿ ಸಮಾಧಾನವಿರಲಿಲ್ಲ.

ಆ ಪಟ್ಟಣದಲ್ಲಿ ಸುದ್ದಿಗಾರರನ್ನು ಕಳುಹಿಸಲಾಯಿತು. ಮತ್ತು ಹೆಬ್ರೋನಿನಲ್ಲಿ ಒಂದು ದೊಡ್ಡ ಗುಂಪು ಸೇರಿ ಬಂತು. ತೂತೂರಿ ಶಬ್ದದ ಸೂಚನೆ ನೀಡಲಾಗಿ, "ಅವರೆಲ್ಲರು ಅಬ್ಷಾಲೋಮನು ಹೆಬ್ರೋನಿಗೆ ಅರಸನಾದನೆಂದು ಆರ್ಬಟಿಸಿದರು" (15:10).[41]

"ನಂತರ ಇಸ್ರಾಯೇಲ್ಯರ ಮನಸ್ಸು ಅಬ್ಷಾಲೋಮನ ಕಡೆಗೆ ತಿರುಗಿ ಕೊಂಡಿತೆಂಬ ವರ್ತಮಾನವು ದಾವೀದನಿಗೆ ಮುಟ್ಟಿತು" (15:13). ಮತ್ತು ದಾವೀದನು ಅತಿ ನಂಬಿಗಸ್ತ ಸಲಹೆಗಾರನಾದ ಅಹಿತೋಫೇಲನು ಸಹ ಅಬ್ಷಾಲೋಮನ ಕಡೆಗೆ ಹೋದನು.[42] ಎಂಬ ಸುದ್ದಿಯನ್ನು ಕೇಳಿ ದಾವೀದನು ಹಿಂಸೆಗೊಳಗಾದನು. ಕತ್ತಿಯು ಜಳಪಿಸುತ್ತಾ ಗಾಯ ಮಾಡುತ್ತ ಮುಂದುವರಿಯಿತು.

> ಮತ್ತು ದಾವೀದನು ಯೆರೂಸಲೇಮಿನಲ್ಲಿದ್ದ ತನ್ನ ಸೇವಕರಿಗೆ - ಏಳಿರಿ, ಓಡಿ ಹೋಗೋಣ; ಇಲ್ಲೇ ಇದ್ದರೆ ನಾವು ಅಬ್ಷಾಲೋಮನ ಕೈಯಿಂದ ತಪ್ಪಿಸಿಕೊಳ್ಳಲಾರೆವು. ಬೇಗ ಹೊರಡೋಣ; ಅವನು ಆಕಸ್ಮಾತ್ತಾಗಿ ನಮ್ಮ ಮೇಲೆ ಬಿದ್ದು ನಮಗೆ ದುರ್ಗತಿಯನ್ನುಂಟು ಮಾಡಿ ಪಟ್ಟಣದವರನ್ನೆಲ್ಲಾ ಕತ್ತಿಯಿಂದ ಸಂಹರಿಸಾನು ಎಂದು ಹೇಳಿದನು (15:14).

ಅರಮನೆಯ ಮೇಲ್ವಿಚಾರಣೆಗಾಗಿ, ದಾವೀದನು ಹತ್ತು ಜನ ಉಪಪತ್ನಿಯರನ್ನು ಬಿಟ್ಟು; ನಂತರ ತನ್ನ ಜೊತೆಯಲ್ಲಿ ಯಥಾರ್ಥವಾಗಿದ್ದ ಸೇವಕರುಗಳನ್ನು ಕರಕೊಂಡು ಪಟ್ಟಣವನ್ನು ಬಿಟ್ಟನು. ಇದು ದಾವೀದನ ಜೀವಿತದಲ್ಲಿ ಅತಿ ಕ್ಷೀಣವಾದಂಥ ಕ್ಷಣವಾಗಿತ್ತು.

> ಅನಂತರ ಅರಸನು ತನ್ನ ಮನೆಯವರನ್ನು ಕರಕೊಂಡು ಹೊರಟನು ... .
> ... ಇವರೆಲ್ಲರೂ ಮುಂದೆ ನಡೆಯುವಾಗ, ಸುತ್ತಣವರೆಲ್ಲರೂ ಬಹಳವಾಗಿ ಅತ್ತರು. ಅರಸನೂ ಎಲ್ಲಾ ಜನರೂ ಕಿದ್ರೋನ್ ಹಳ್ಳವನ್ನು ದಾಟಿ ಅರಣ್ಯ ಮಾರ್ಗ ಹಿಡಿದರು, ...
>
> ದಾವೀದನು ಮೋರೆಯನ್ನು ಮುಚ್ಚಿಕ್ಕೊಂಡು ಅಳುತ್ತಾ ಬರಿಗಾಲಿನಿಂದ ಎಣ್ಣೇ ಮರಗಳ ಗುಡ್ಡವನ್ನೇರಿದನು. ಅವನ ಜೊತೆಯಲ್ಲಿದ್ದ ಜನರೂ ಮೋರೆ ಮುಚ್ಚಿಕೊಂಡು ಅಳುತ್ತಾ ಏರಿದರು (15:16, 23, 30).

ದಾವೀದನು ಓಡಿಹೋಗಲು ಅನೇಕ ಉದ್ದೇಶಗಳಿದ್ದವು. ದೇವರ ಪಟ್ಟಣದಲ್ಲಿ ರಕ್ತಪಾತ ವಾಗುವದನ್ನು ತಡೆಗಟ್ಟಿದನು. ಪಟ್ಟಣವು ತನ್ನನ್ನು ತಾನೇ ರಕ್ಷಿಸಿಕೊಳ್ಳಲಿ ಎಂದು ಆಶಿಸಿದನು. ನಮ್ಮ ಅಧ್ಯಯನವು ಖಂಡಿತವಾಗಿ ತಿಳಿಸುತ್ತದೆ, ದಾವೀದನು ಭಯಪಟ್ಟಿದ್ದರಿಂದ ಓಡಿ ಹೋಗೋಣ. ಇದೇ ಮುಖ್ಯ ಕಾರಣವಾಗಿತ್ತು: "ಏಳಿರಿ, ಓಡಿ ಹೋಗೋಣ; ಇಲ್ಲೇ ಇದ್ದರೆ ನಾವು ಅಬ್ಷಾಲೋಮನ ಕೈಯಿಂದ ತಪ್ಪಿಸಿಕೊಳ್ಳಲಾರೆವು. ಬೇಗ ಹೊರಡೋಣ; ಅವರು ಅಕಸ್ಮಾತ್ತಾಗಿ ನಮ್ಮ ಮೇಲೆ ಬಿದ್ದು ನಮಗೆ ದುರ್ಗತಿಯನ್ನುಂಟು ಮಾಡಿ ಪಟ್ಟಣದವರನ್ನೆಲ್ಲಾ ಕತ್ತಿಯಿಂದ ಸಂಹರಿಸಾನು ಎಂದು ಹೇಳಿದನು" (15:14).[43] ಬೆತ್ಷೆಬಳೊಂದಿಗೆ ಪಾಪ ಮಾಡುವದಕ್ಕಿಂತ ಮೊದಲು ದಾವೀದನು ಈ ರೀತಿಯಾದ ಪ್ರತಿಕ್ರಿಯೆಯನ್ನು ನೀಡುತ್ತಿರಲಿಲ್ಲ.[44] ಅವನ ಜೀವನ, ಹತೋಟಿಯಲ್ಲಿರದ ಕಾರಣ, ಬೇರೆಯವರು ಅವನಿಗಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು.

ಅತಿ ಶೀರ್ಘವೇ, ಅಬ್ಷಾಲೋಮನು ಯೆರೂಸಲೇಮಿಗೆ ದಾವಿಸಿದನು. ಇದು ಇಷ್ಟು ಸರಳವಾಯಿತು ಎಂದು ಅಬ್ಷಾಲೋಮನು ಆಶ್ಚರ್ಯಪಟ್ಟನು. ಅವನು ಯೆರುಸಲೇಮಿಗೆ ಹೋಗಿ ಯುದ್ಧ ಮಾಡಬೇಕು ಎಂಬ, ಯಾವುದೇ ಯೋಜನೆಗಳನ್ನು ಮಾಡಿರಲಿಲ್ಲ. (ತನ್ನ ತಂದೆಗೆ ವಾತನು ಸಲಹೆಗಾರನಾಗಿದ್ದನೋ, - ಈಗ ಅವನ ಸಲಹೆಗಾರನಾಗಿದ್ದನು [2 ಸಮುವೇಲ 16:23]) ಅಹೀತೋಫೆಲನಿಗೆ, "ಈಗ ನಾವು ಏನು ಮಾಡೋಣ [ಮುಂದೆ]"? (16:20). ಆಗ ಅಹೀತೋಫೆಲನು ಕೇಳಲು, "ಅವನು ಹೋಗಿ ನಿನ್ನ ತಂದೆಯು ಮನೆಕಾಯುವದಕ್ಕೆ ಬಿಟ್ಟಿರುವ ಅವನ ಉಪಪತ್ನಿಗಳೊಡನೆ ಸಂಗಮಿಸು" (16:21) ಅಂದನು. ಅಬ್ಷಾಲೋಮನ ಈ ಕ್ರಿಯೆಯು ಜನರಿಗೆ ಮೂರು ಅಂಶಗಳನ್ನು ಪ್ರಾಯೋಜಿಸಿತ್ತು: ತನ್ನ ತಂದೆಯ ಅರಸನ ಸ್ಥಾನವನ್ನು ತಾನೇ ತೆಗೆದುಕೊಂಡಿದ್ದನು. ಅವನು ಅವನ ತಂದೆಗೆ ಭಯಪಡಲಿಲ್ಲ. ಮತ್ತು ಅವನಿಗೂ - ದಾವೀದನಿಗೂ ಯಾವ ವಿಧವಾದಂಥ ಸಂಬಂಧವು[45] ಇರಲಿಲ್ಲ ಎಂದು ತೋರಿ ಸಿತು. "ಆಗ ಅಬ್ಷಾಲೋಮನಿಗೋಸ್ಕರ ಮಾಳಿಗೆಯ ಮೇಲೆ ಗುಡಾರ ಹಾಕಿದರು. [ಈ ಮಾಳಿಗೆಯ ಮೇಲೆಯೇ ಎಲ್ಲಾ ಕಾರ್ಯಗಳು ಪ್ರಾರಂಭವಾಗಿದ್ದವು] ಅವನು ಎಲ್ಲಾ ಇಸ್ರಾಯೇಲ್ಯರ ಮುಂದೆಯೇ ತನ್ನ ತಂದೆಯ ಉಪಪತ್ನಿಗಳನ್ನು ಕೂಡಿದನು" (16:22).

ಬಿತ್ತುವ ಮತ್ತು ಕೊಯ್ಯುವ ಎರಡು ನಿಯಮಗಳನ್ನು ನೆನಪು ಮಾಡಿಕೊಳ್ಳಿರಿ: ನೀವು ಕೊಯ್ಯುತ್ತೀರಿ, ಅಧಿಕವಾಗಿ ಕೊಯ್ಯುತ್ತೀರಿ. ದಾವೀದನ ವ್ಯಭಿಚಾರವು ಒಬ್ಬ ಸ್ತ್ರೀಯ ಸಂಗಡ ಮಾತ್ರವಿತ್ತು; ಅಬ್ಷಾಲೋಮನದು ಹತ್ತು ಸ್ತ್ರೀಯರ ಸಂಗಡವಾಗಿತ್ತು; ದಾವೀದನ ವ್ಯಭಿಚಾರವು ರಹಸ್ಯವಾಗಿತ್ತು; ಅಬ್ಷಾಲೋಮನದು ಬಹಿರಂಗವಾಗಿತ್ತು; "ಅದು ಇಸ್ರಾಯೇಲ್ಯರು ನೋಡು ವಂತಿತ್ತು." ದಾವೀದನು ಪಾಪದ ನಂತರ ನಡೆಯ ಬೇಕಾಗಿದ್ದ ಹೊಲಸಾದ ಕಾರ್ಯದ ಕುರಿತು ಪ್ರವಾದನೆಯು ನೆರವೇರಿತು:

> ಯೆಹೋವನಾದ ನನ್ನ ಮಾತನ್ನು ಕೇಳು - ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು ಉಂಟಾಗುವಂತೆ ಮಾಡುವೆನು. ನಿನ್ನ ಹೆಂಡತಿಯರನ್ನು ತೆಗೆದು ನಿನ್ನೆದುರಿನಲ್ಲಿಯೇ ಇನ್ನೊಬ್ಬನಿಗೆ ಕೊಡುವೆನು. ಅವನು ಹಗಲಿನಲ್ಲಿಯೇ ಅವರ ಕೂಡ ಮಲಗುವನು (2 ಸಮುವೇಲ 12:11).

ಮಾಳಿಗೆಯ ಮೇಲಿದ್ದ ಗುಡಾರದಿಂದ ಹೊರ ಬಂದ ಅಬ್ಷಾಲೋಮನನ್ನು ನಾನು ನೋಡು ತ್ತೇನೆ, ಕೆಳಗಿದ್ದಂಥ ಜನರಿಗೆ ಮುಗುಳ್ನಗೆ ತೋರಿ, ತನ್ನ ಕೈಗಳನ್ನು ಮೇಲಕ್ಕೆತ್ತಿ ಜಯವನ್ನು ತೋರ್ಪಡಿಸಿದನು. ಅವನ ತಂದೆ ಯಾವುದಕ್ಕಾಗಿ ನಿಂತುಕೊಂಡಿದ್ದನೋ, ಅದಕ್ಕೆ ವಿರುದ್ಧ ವಾಗಿ ತನ್ನ ಪ್ರಾಣಿಬುದ್ಧಿಯನ್ನೂ, ವೈರತ್ವವನ್ನೂ ತೋರ್ಪಡಿಸಿದನು![46]

ಈ ವಿರೋಧಿಗೆ ಕೆಲವು ಮಾತುಗಳನ್ನು ಹೇಳಲು ಸ್ವಲ್ಪ ಸಮಯವನ್ನು ತೆಗೆದು ಕೊಳ್ಳುತ್ತೇನೆ: ಅಬ್ಷಾಲೋಮನೆ, ಹೌದು ನಿನ್ನ ತಂದೆ ಯಾವ ರೀತಿ ಇರಬೇಕಿತ್ತೋ, ಆ ರೀತಿ ಇರಲಿಲ್ಲ ಇದು

ಸತ್ಯ. ಹೌದು ಅವನು ನಿನ್ನನ್ನು ಅಲಕ್ಷ್ಯ ಮಾಡಿದನು ಇದು ಸಹ ಸತ್ಯ. ಅವನು ಪಾಪಕ್ಕೆ ಮರುಳಾದದ್ದೂ ಸತ್ಯ. ಆ ಪಾಪವನ್ನು ಮುಚ್ಚಿಹಾಕಲು, ಇನ್ನೂ ಪಾಪವನ್ನು ಮಾಡಿದನು. ನೀನು ಯೆರುಸಲೇಮಿಗೆ ಹಿಂದಿರುಗಿದಾಗ, ನಿನ್ನೊಂದಿಗೆ ಸಂದಾನ ಮಾಡಿಕೊಳ್ಳುವ ಪ್ರಯತ್ನವನ್ನು ಸಹ ಮಾಡಲಿಲ್ಲ. ಆದರೆ ನೀನು ಮಾಡುತ್ತಿರುವಂಥ ಈ ಕಾರ್ಯಕ್ಕೆ ಈ ಸಂಗತಿಗಳು ಕಾರಣವೇನು?

ಈಗ ಅವನ ನಗು ಅವನ ಮುಖದಿಂದ ಮಾಯವಾಯಿತು, ಬಹುಶ ಗುರುಗುಟ್ಟುತ್ತ "ಹೌದು, ಸಾವಿರ ಸಾಲಿ ಹೌದು!"

ಅಬ್ಷಾಲೋಮನೇ, ಒಂದು ನಿಮಿಷ ಸುಮಾರು ಹದಿನೆಂಟು ಹುಡುಗರು ಇದೇ ಮನೆಯಲ್ಲಿ, ಮತ್ತು ಇಂಥಾ ಪರಿಸ್ಥಿತಿಯಲ್ಲಿ ಬೆಳೆದರೂ, ಅವರ್ಯಾರು ದಂಗೆ ಏಳಲಿಲ್ಲ. ಮತ್ತು ಯಾವದೇ ವಿಧವಾದ ಗೂಡ ಕ್ರಿಯೆಗಳನ್ನು ಮಾಡಲಿಲ್ಲ,[47] ಅವರು ಬಂಡಾಯವನ್ನು ಮಾಡಲಿಲ್ಲ.

ಅವನ ತಂದೆಯು ಬಿತ್ತಿದ್ದನ್ನು ಕೊಯ್ಯುತ್ತಿದ್ದನು ಎಂದು ಅಬ್ಷಾಲೋಮನು ಗ್ರಹಿಸಿಕೊಳ್ಳಲಿಲ್ಲ. ಅದೇ ನಿಯಮಗಳು, ಅವನಿಗೂ ಸಹ ಅನ್ವಹಿಸಿದ್ದವು ಎಂದು ತಿಳಿಯಲಿಲ್ಲ. ಅವನು ಆರಿಸಿಕೊಳ್ಳಲು ಸ್ವತಂತ್ರನಾಗಿದ್ದನು; ಅವನು ಮಾಡಿದ ಕ್ರಿಯೆಗಳನ್ನು ಮಾಡಲು, ಯಾರು ಒತ್ತಾಯಪಡಿಸಿರಲಿಲ್ಲ ಅವನು ನಡೆಸಿದ ಕಾರ್ಯಕ್ಕೆ ಅವನೇ ಜವಾಬ್ದಾರಿ ಯುಳ್ಳವನಾಗಿದ್ದನು. ಅವನು ಮಾಡಿದ ಕ್ರಿಯೆಗಳಿಗೆ, ಅವನ ತಂದೆ ಕಾರಣನಲ್ಲ, ನನ್ನ ಮಾತನ್ನು ಕೇಳು: ನೀನು ಕೊಯ್ದದನ್ನೇ ನೀನು ಬಿತ್ತುವವನಾಗಿದ್ದೀ!

ನಾನು ಹೇಳಿದಂಥ ಮಾತು ಸತ್ಯವಾಗಿದೆಯೋ? ನಾನು ನಿಶ್ಚಯವಾಗಿ ತಿಳಿಸುತ್ತೇನೆ, ಒಂದು ವೇಳೆ ಅಬ್ಷಾಲೋಮನು ಈ ದಿನ ಇಲ್ಲಿ ನಿಲ್ಲುವದಾದರೆ, ಅವನು ಹೇಳ ಬಹುದಾದದ್ದು "ಆಮೆನ್, ಇದು ಸತ್ಯ!" ಎಂಬುದಾಗಿ ಅಂತ್ಯದ ಕಥೆಯನ್ನು ಕೇಳಿರಿ:

**ಬಗೆ ಹರಿಸುವಿಕೆ (18:1-33)**

ಅಧ್ಯಾಯ 18ರಲ್ಲಿ ದಾವೀದನ ಸೈನಿಕರು ಅಬ್ಷಾಲೋಮನ ಸೈನ್ಯವನ್ನು ಎದುರಿಸಲು ಸಿದ್ಧರಾದರು. ದಾವೀದನು ತನ್ನ ಸಹಾಸ್ರಾಧಿಪತಿಗಳಿಗೂ, ಶತಾಧಿಪತಿಗಳಿಗೂ ಹೇಳಿದ್ದೇ ನೆಂದರೆ "ನನಗೋಸ್ಕರವಾಗಿ ಯೌವನಸ್ಥನಾದ ಅಬ್ಷಾಲೋಮನನ್ನು ಕರುಣಿಸಿರಿ ಎಂದು ಆಜ್ಞಾಪಿಸಿದನು" (ವಚನ 5, ದಾವೀದನ ಮಾತುಗಳನ್ನು ಕೀರ್ತನೆ 103:13ಎ ಯಲ್ಲಿ ಗಮನಿಸಿ).

ಯುದ್ಧವು ಪ್ರಾರಂಭವಾದಾಗ ಇಪ್ಪತ್ತು ಸಾವಿರ ಜನರು ಅಸುನೀಗಿದರು ಯೌವನಸ್ಥನಾದ ಅಬ್ಷಾಲೋಮನು ತಾನು ಎಲ್ಲಿಯವರೆಗೂ ಅರಸನಾಗಿದ್ದನೋ ಅಲ್ಲಿಯವರೆಗೂ ಎಷ್ಟು ಜನರಿಗೆ ಗಾಯವಾಯಿತು ಎಂದು ಲೆಕ್ಕಿಸಲಿಲ್ಲ. ಆ ಮಗನ ಹೃದಯದಲ್ಲಿ ಇದ್ದ ಅಸೂಯೆ ಮತ್ತು ದ್ವೇಷದ ನಿಮಿತ್ತ ಇಪ್ಪತ್ತು ಸಾವಿರ ಜನರು ಅಸುನೀಗಿದ್ದರು.

ಬಹಳಷ್ಟು ಯುದ್ಧವು ಎಫ್ರಾಯೀಮಿನ ಅರಣ್ಯ ಪ್ರದೇಶದಲ್ಲಿ ನಡೆಯಿತು.[48] "ಹೋರಾಟದ ಸಮಯದಲ್ಲಿ, ಅವನು ಹತ್ತಿದ ಹೇಸರಕತ್ತೆಯು ಒಂದು ದೊಡ್ಡ ಏಲಾಮರದ ಕೆಳಗೆ ಹಾದು ಹೋಗುವಾಗ ಅವನ ತಲೆಯು ನಿಬಿಡವಾದ ಅದರ ಕೊಂಬೆಗಳಲ್ಲಿ ಸಿಕ್ಕಿಕೊಂಡಿತು" (18:9ಎ). ಅವನ ದಪ್ಪವಾದ ಮತ್ತು ಸುಂದರವಾದ ಕೂದಲು ಕೊಂಬೆಗಳಲ್ಲಿ ಸಿಕ್ಕಿಕೊಂಡಿತೋ ಅಥವಾ ಅವನ ತಲೆಯು ಮರದ ಕವೆಯಲ್ಲಿ ಸಿಕ್ಕಿಕೊಂಡಿತೋ ನನಗೆ ತಿಳಿಯದು ಯಾವ ರೀತಿ ಯಲ್ಲಾದರೂ ಇರಲಿ, ಅವನ ಕೂದಲು ಸಿಲುಕಿಕೊಂಡಿತು (ಇಲ್ಲದೆ ಹೋಗಿದ್ದರೆ ಅವನು ಬಿಡಿಸಿಕೊಂಡು ಹೋಗಬಹುದಾಗಿತ್ತು).[49] ಕೊನೆಯದಾಗಿ, ಅವನು ಯಾವ ಕೂದಲಿನ ನಿಮಿತ್ತ, ಹೆಮ್ಮೆ ಪಡುತ್ತಿದ್ದನೋ, ಅದೇ ಅವನ ಮರಣಕ್ಕೆ ಕಾರಣವಾಯಿತು. "ಹೇಸರಕತ್ತೆಯು ಅವನ ಕೆಳಗಿನಿಂದ ಓಡಿಹೋಯಿತು. ಅವನು ಭೂಮಿಗೂ ಆಕಾಶಕ್ಕೂ ಮಧ್ಯದಲ್ಲಿ ನೇತಾ ಡುವವನಾದನು" (18:9ಬಿ). ಅವನು ಹಿಂದಕ್ಕೂ ಮುಂದಕ್ಕೂ ನೂಕಲ್ಪಟ್ಟನು. ಅವನು

ಮರಣದಿಂದ ಪಾರಾಗಲು ಪ್ರಯತ್ನಿಸಿದಾಗ, ಕೊಂಬೆಗಳ ದೆಸೆಯಿಂದ ಅವನ ಕೈಗಳು ಹರಿಯಲು ಪ್ರಾರಂಭಿಸಿದವು.[50]

ಒಬ್ಬ ಸೈನಿಕನು ಅಬ್ಷಾಲೋಮನು ನೇತಾಡುತ್ತಿರುವದನ್ನು ಕಂಡೆನು ಎಂದು, ಯೋವಾಬನಿಗೆ ತಿಳಿಸಲು, ನೀನು ಕಂಡ ಕೂಡಲೇ "ಯಾಕೆ ಅವನನ್ನು ಕಡಿದು ನೆಲಕ್ಕುರುಳಿಸಲಿಲ್ಲ?" ಅಂದನು (18:11). ಅದಕ್ಕೆ ಆ ಮನುಷ್ಯನು ತಲೆ ಅಲ್ಲಾಡಿಸಿ. "ಅರಸನು ನಮ್ಮೆಲ್ಲರಿಗೆ ಕೇಳಿಸುವಂತೆ ನಿನಗೂ ಅಬೀಷೈಗೂ ಇತ್ತೈಗೂ ಜಾಗರೂ ಕತೆಯಿಂದಿರ್ರಿ, ಯೌವನಸ್ಥನಾದ ಅಬ್ಷಾಲೋಮನನ್ನು ಯಾರೂ ಮುಟ್ಟಬಾರದೆಂದು ಆಜ್ಞಾಪಿಸಿದನಲ್ಲವೋ!" (18:12).

ಅಬ್ಷಾಲೋಮನು ಇರುವ ಕಡೆಗೆ, ಯೋವಾಬನು ಬಹಳ ಕೊಚ್ಚಿನಿಂದ ಹೊರಟನು. ದಾವೀದನು ಬೆತ್ಷೇಬಳೊಂದಿಗೆ ಹೊಲಸಾದ ಪಾಪ ಮಾಡುವದಕ್ಕೆ ಮುನ್ನ ಯೋವಾಬನು ಅರಸನಾದ ದಾವೀದನ ಯಾವುದೇ ಅಪ್ಪಣೆಯನ್ನು ಮೀರಿರಲಿಲ್ಲ ಆದರೆ ಈಗ ಸೈನಾಧಿಕಾರಿಯು ಯಾವುದೇ ವಿಧವಾಗಿ ಗೊಂದಲ ಮಾಡಿಕೊಳ್ಳದ ಯೌವನಸ್ಥನ ಹೃದಯಕ್ಕೆ ಮೂರು ಈಟಿಗಳಿಂದ ಚುಚ್ಚಿದನು.[51] ನಂತರ ಯೋವಾಬನ ಆಯುಧ ಹೊರುವಂಥ ಹತ್ತು ಜನರು ತಮ್ಮ ಈಟಿಗಳನ್ನು ಸಹ, ಅಬ್ಷಾಲೋಮನ ಸೋಲುತ್ತಿದ್ದ ದೇಹಕ್ಕೆ ಚುಚ್ಚಿದರು. ಆಗ ಅವನ ದೇಹವು, ಮಾನವನ ದೇಹವು, ಮಾನವನ ದೇಹದಂತೆ ಕಾಣಿಸದೆ, ಮೆತ್ತನೆಯ ಹಾಸಿಗೆಯಂತೆ ಕಾಣುತ್ತಿತ್ತು.

ಅಬ್ಷಾಲೋಮನೆ ನಾನು ಹೇಳಿದ ವಿಷಯವನ್ನು ನೀನು ಆಲಿಸಿದೆಯೋ? ನಿನ್ನ ತಂದೆಗೆ ವಿರೋಧವಾಗಿ ದಂಗೆ ಎದ್ದ ನಂತರ ಉಂಟಾಗುವ, ಪರಿಣಾಮದ ಬಗ್ಗೆ ಯೋಚಿಸಿದ್ದಿಯೋ? "ಮನುಷ್ಯನು ಏನು ಬಿತ್ತುತ್ತಾನೋ, ಅದನ್ನೇ ಅವನು ಕೊಯ್ಯುವನು."

ಯುದ್ಧದ ಸುದ್ದಿಯೊಡನೆ ಒಬ್ಬ ದೂತನು ದಾವೀದನ ಬಳಿಗೆ ಬಂದನು. ಅದಕ್ಕೆ ದಾವೀದನು, "ಯಾರು ಗೆದ್ದರು? ಯಾರು ಸೋತರು? ಎಷ್ಟು ಜನರಿಗೆ ಗಾಯವಾಯಿತು?" ಎಂದು ವಿಚಾರಿಸದೆ ಅಲ್ಲಿ ಸುದ್ದಿಯನ್ನು ಮುಟ್ಟಿಸಿದ ಮೊದಲನೆಯ ವ್ಯಕ್ತಿಗೆ, "ಯೌವನಸ್ಥನಾದ ಅಬ್ಷಾಲೋಮನು ಸುರಕ್ಷಿತನಾಗಿದ್ದಾನೋ? ಎಂದು ಕೇಳಿದನು" (18:29). ಎರಡನೆಯ ದೂತನು ಬಂದಾಗ, ದಾವೀದನು ಪುನ "ಯೌವನಸ್ಥನಾದ ಅಬ್ಷಾಲೋಮನು ಸುರಕ್ಷಿತನಾಗಿದ್ದಾನೋ?" (18:32ಎ). ಎಂದು ಕೇಳಲು ಎರಡನೆಯ ದೂತನು - "ನನ್ನ ಒಡೆಯನಾದ ಅರಸನ ಶತ್ರುಗಳಿಗೂ ಅವನಿಗೆ ಕೇಡು ಮಾಡುವದಕ್ಕೆ ಎದ್ದು ನಿಂತವರೆಲ್ಲರಿಗೂ ಆ ಯೌವನಸ್ಥನಿಗಾದ ಗತಿಯೇ ಆಗಲಿ ಎಂದು ಉತ್ತರ ಕೊಟ್ಟನು!" (18:32ಬಿ). ಇನ್ನೊಂದು ಅರ್ಥದಲ್ಲಿ "ನಿನ್ನ ಮಗನು ಸತ್ತನು ಎಂದನು!"

ಅಬ್ಷಾಲೋಮನ ಹೃದಯಕ್ಕೆ ಚುಚ್ಚಿದ ಈಟಿಗಳ ಅನುಭವದಂತೆ ದಾವೀದನಿಗೂ ಅನುಭವ ಉಂಟಾಯಿತು. ನಂತರ ವಾಕ್ಯದಲ್ಲಿ ಪ್ರತಿಯೊಬ್ಬ ಮನಸ್ಸಾಕ್ಷಿಯುಳ್ಳ ತಂದೆಗೆ ಉಂಟಾಗುವಂತ ಬಾಧೆಯ ಕುರಿತು ಇರುವ ಮಾತುಗಳನ್ನು ನೋಡುತ್ತೇವೆ:

> ಇದನ್ನು ಕೇಳಿ ಅರಸನು ಎದೆಯೊಡೆದವನಾಗಿ - ನನ್ನ ಮಗನೇ, ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನಾದ ಅಬ್ಷಾಲೋಮನೇ, ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೋ ಒಳ್ಳೇದಾಗುತ್ತಿತ್ತು, ಅಬ್ಷಾಲೋಮನೆ, ನನ್ನ ಮಗನೇ, ಮಗನೇ ಎಂದು ಕೂಗಿ ಅಳುತ್ತಾ ಹೆಬ್ಬಾಗಲಿನ ಮೇಲಿರುವ ಕೋಣೆಗೆ ಹೋದನು (18:33).

ತಂದೆಗಳೇ, ನೀವು ನಿಮ್ಮ ಮಕ್ಕಳಿಗಾಗಿ ಸಮಯವನ್ನು ತೆಗೆದುಕೊಳ್ಳದೆ ಹೋದರೆ, ನೀವು ಯಾವ ರೀತಿಯಾದ ಜನರಾಗಿರಬೇಕೋ? ಆ ರೀತಿ ಇಲ್ಲದೆ ಹೋದರೆ, ನೀವು ನಿಮ್ಮ ಗಂಡು-ಹೆಣ್ಣು ಮಕ್ಕಳನ್ನು ಯಾವ ಪರಿಸ್ಥಿತಿಗೆ ತರುತ್ತಿರುವಿರಿ ಎಂದು ತಿಳಿದಿದ್ದೀರೋ? ತಂದೆ ತಾಯಿಗಳ ಬಗ್ಗೆ ಕಹಿಭಾವನೆಯನ್ನು ಇರುವ ಮಕ್ಕಳೇ, ನಿಮ್ಮ ಕ್ರಿಯೆಗಳಿಗೆ ನೀವೇ ಜವಬ್ದಾರರು ಎಂದು ಗ್ರಹಿಸಿಕೊಂಡಿದ್ದೀರೋ - ನೀವು ನಿಮ್ಮ ತಂದೆ ತಾಯಿಗಳ ಹೃದಯವನ್ನು ಹರಿದು

ಹಾಕುತ್ತಿರುವಿರಿ ಎಂದು ಪರಿಗ್ರಹಿಸಿದ್ದೀರೋ?

ಇಬ್ಬರೂ, ಮೂವರು ಸಾಕ್ಷಿಗಳ ಬಾಯಿಂದ ಕಾರ್ಯಗಳು ಸತ್ಯ ಸ್ಥಾಪನೆಯಾಗುತ್ತದೆ. ಅಬ್ಷಾಲೋಮನು ನನ್ನ ಬಲಗಡೆಯಲ್ಲೂ, ದಾವೀದನು ನನ್ನ ಎಡಗಡೆಯಲ್ಲಿಯೂ.[52] ನಿಂತುಕೊಂಡು, ಪೌಲನ ಭಾವನಾತ್ಮಕವಾದ ಮಾತುಗಳನ್ನು ಅವರು ಸಂಭಾಷಿಸುವದನ್ನು ಆಲಿಸಿರಿ: "ಮನುಷ್ಯನು ಏನನ್ನು ಬಿತ್ತುತ್ತಾನೋ? ಅದನ್ನೇ ಅವನು ಕೊಯ್ಯುವನು" - ಕ್ಷಮಾಪಣೆ ಉಂಟಾಗಿದ್ದರೂ ಸಹ.

## ಮುಕ್ತಾಯ

ನಾವು ಯಾರೂ ಸಹ ಪರಿಪೂರ್ಣರಲ್ಲ. ನಾವು ಉತ್ತಮವಾದದ್ದನ್ನು ಮಾಡಿದ್ದರೂ ಸಹ, ನಾವು ಪಾಪವನ್ನು ಮಾಡುತ್ತೇವೆ. ಆದಾಗ್ಯೂ ದೇವರ ಸಹಾಯದಿಂದ, ಶೋಧನೆಯಿಂದ ಎಷ್ಟು ದೂರ ಸಾಧ್ಯವೋ. ಅಷ್ಟು ದೂರವಿರೋಣ - ನಿಮ್ಮ ಆತ್ಮದಲ್ಲಿ ಆಳವಾಗಿರುವ ಪಾಪವನ್ನು ಬುಡ ಸಮೇತ ಕಿತ್ತು ಹಾಕೋಣ. ಗಲಾತ್ಯ 6:7, 8ರಲ್ಲಿರುವ ವಾಕ್ಯವನ್ನು ಹೃದಯಕ್ಕೆ ತೆಗೆದು ಕೊಳ್ಳೋಣ. ದಾವೀದನ ಪಾಪದ ಪರಿಣಾಮದ ಸಂದೇಶವನ್ನು ಹೃದಯಕ್ಕೆ ತೆಗೆದು ಕೊಳ್ಳೋಣ. ಪಾಪವು ನಿಮ್ಮ ಜೀವಿತವನ್ನು ನಾಶ ಮಾಡುತ್ತದೆ. ಅದು ನಿನ್ನನ್ನು, ನಿನ್ನ ಪ್ರೀತಿ ಪಾತ್ರರಿಂದ ದೂರಮಾಡುತ್ತದೆ. ನಿನ್ನ ಜೀವಿತದಲ್ಲಿರುವ ಅಮೂಲ್ಯವಾದ ಮತ್ತು ಅತಿ ಸುಂದರವಾದ ವಿಷಯಗಳನ್ನು ನಾಶ ಮಾಡಿಬಿಡುತ್ತದೆ. ದೇವರೇ, ನಮ್ಮೆಲ್ಲರಿಗೆ ಸಹಾಯಿಸು - ತಂದೆತಾಯಿಗಳಾಗಿರಬಹುದು, ಮಕ್ಕಳಾಗಿರಬಹುದು - ನಾವು ಏನಾಗಿರಬೇಕೋ, ಆ ರೀತಿ ಯಾಗಿರುವದಕ್ಕೆ!

ನಾನು ಇದನ್ನು ಅಂತ್ಯಗೊಳಿಸುವಾಗ, ನಾವು ಪಾಪದ ಪರಿಣಾಮದ ಎಲ್ಲಾ ಕಾರ್ಯಗಳನ್ನು ತೆಗೆದು ಹಾಕಲು ಸಾಧ್ಯವಿಲ್ಲ ಎಂದು ಇನ್ನೊಂದು ಸಾರಿ ನಾನು ಒತ್ತಿ ಹೇಳುತ್ತೇನೆ. ದೇವರು ನಮ್ಮ ಪಾಪದ ಮನೋಭಾವನೆಯನ್ನು ತೆಗೆದು ಹಾಕುತ್ತಾನೆ, ಆ ಪರಿಣಾಮವನ್ನು ಸಹಿಸಿಕೊಳ್ಳಲು *ಬಲವನ್ನು* ನೀಡುತ್ತಾನೆ - ನಾವು ತಗ್ಗಿಸಿಕೊಂಡು ಆತನೆಡೆಗೆ ಬಂದರೆ ಮಾತ್ರ ನಮ್ಮ ಜೀವಿತದಲ್ಲಿ ಈ ಕೊರತೆಯಿದ್ದರೆ, ಅದಕ್ಕೆ ಎಚ್ಚರವಹಿಸಲು ಈ ದಿನಕ್ಕಿಂತ, ಹತ್ತಿರ ವಾದ ಬೇರೊಂದು ದಿವಸವಿಲ್ಲ. ನಾಳೆ ಎಂಬುದಾಗಿ ಹೇಳಲು ಧೈರ್ಯಗೊಳ್ಳದೇ, ಈ ದಿನವೇ ಎಚ್ಚರವಹಿಸು.

---

ಟಿಪ್ಪಣಿಗಳು

[1]KJV "ಸುಂದರ" ಎಂಬ ಪದವನ್ನು ಉಪಯೋಗಿಸುತ್ತದೆ. ಅದು ಉಚಿತ ತರ್ಜುಮೆಯಾಗಿರುತ್ತದೆ. ಆದರೆ ಈ ದಿವಸಗಳಲ್ಲಿ "ಬಹು ಅಂದವಾದ" ಎಂಬ ಪದವನ್ನು ಸ್ತ್ರೀಯರಿಗೆ ಉಪಯೋಗಿಸುತ್ತೇವೆ. "ಬಹು ಅಂದವಾದ" ಪದವನ್ನು ಪುರುಷರಿಗೆ ಉಪಯೋಗಿಸುತ್ತೇವೆ. [2]ಬಹುಶ ಮೂರರಿಂದ ಐದು ಪೌಂಡುಗಳ "ಭಾರವುಳ್ಳ" ಯಾವುದಾದರು ವಸ್ತುವನ್ನು ಪಡೆಯಬಹುದು. ಅದು ಕೈಭಾರವೆಂದು, ಅದು ಭಾರವಾಗಿದೆ ಎಂದು. ನನ್ನ ವಿಷಯದಲ್ಲಿ ನನ್ನ ಕೂದಲಿಲ್ಲದ ಮುಂತಲೆಯ ಮೇಲೆ "ಭಾರದ" ಚೀಲವನ್ನು ಹೊತ್ತು ಕೊಳ್ಳುತ್ತೇನೆ. "ನನಗೆ ಭಾರ ಹೊರುವ ಅಭ್ಯಾಸವಿಲ್ಲ ಎಂದು ಸೇರಿಸಿ." [3]ಉಪಪತ್ನಿ, ಪತ್ನಿಯಾಗಿರಲಿಲ್ಲ. ಉಪಪತ್ನಿ ತನ್ನ ಗಂಡನಿಗೆ ಮದುವೆಯಾದ ಮೇಲೆ ಅವಳಿಗೆ ಅವನ ಬಾಧ್ಯತೆಯ ನೈತಿಕ ಹಕ್ಕು ಸಹ ಇತ್ತು. ಆದರೆ ಅವನ ನಿಜವಾದ ಪತ್ನಿಗೆ ಇದ್ದಷ್ಟು ಇರಲಿಲ್ಲ. ಅವಳು "ಎರಡನೇ ದರ್ಜೆ ಪತ್ನಿ" ಎಂದು ಭಾವಿಸಲಾಗಿತ್ತು. [4]2 ಸಮುವೇಲ 15:16. ಅವನಿಗೆ ಬೇರೆಯವರೂ ಇದ್ದರು (2 ಸಮುವೇಲ 19:5). [5]"ತಾಮಾರಳು" ಅಂದರೆ "ಹಸ್ತ." [6]ಬಹು ಸುಂದರನಾದ ಅಬ್ಷಾಲೋಮನು, ಮತ್ತು ಪೂರ್ಣ ಸುಂದರಿಯಾದ ತಾಮಾರಳು ಬೀದಿಯಲ್ಲಿ ನಡೆಯುವಾಗ, ಪ್ರತಿ ಜನರ ತಲೆಗಳು ಅವರ ಕಡೆಗೆ ವಾಲುತ್ತಿದ್ದವು? [7]ನಾವು ಯಾರನ್ನಾದರು ಪ್ರೀತಿಸಿದರೆ, ಅಮ್ನೋನನು, ತಾಮಾರಳನ್ನು ನಡೆಸಿ ಕೊಂಡಂತೆ ಮಾಡಬೇಡಿರಿ. ಸತ್ಯವಾದ ಪ್ರೀತಿ ಮತ್ತು ಗೌರವ ಈ ಎರಡು ಬೇರ್ಪಡಿಸಲಾಗದು. [8]ತಾಮಾರಳಿಗೆ ಗಂಡನನ್ನು ಹುಡುಕಬೇಕಾಗಿದ್ದರೆ, ಅವಳ ಕನ್ಯತ್ವವನ್ನು ದಾವೀದನು ರುಜುವಾತು ಪಡಿಸಬೇಕಿತ್ತು. "ಒಡಕಾಗದ ಸರಕು." [9]ಅವನಿಗೆ ಯೋನಾದಾಬನೆಂಬ ಒಬ್ಬ ಗೆಳೆಯನಿದ್ದನು.

"ಇದನ್ನು ದಾವೀದನ ಅಣ್ಣನಾದ ಶಿಮ್ಮನ ಮಗನು" (2 ಸಮುವೇಲ 13:3; ನೋಡಿರಿ 1 ಸಮುವೇಲ 16:9ನ್ನು ನೋಡಿರಿ); ಯೋನಾದಾಬನು ದಾವೀದನ ಅಣ್ಣನ ಮಗನು ಮತ್ತು ಅಮ್ನೋನನು ಚಿಕ್ಕಮ್ಮನ ಮಗನು. [10]ದಾವೀದನು, ಯೋನಾತಾನನಲ್ಲಿ ಇದ್ದಂಥ ವ್ಯತ್ಯಾಸವನ್ನು ಗಮನಿಸಿ, "ಅವನು ಕರ್ತನಲ್ಲಿ ಅವನ ಕೈಗಳನ್ನು ಬಲಪಡಿಸಿದನು" ಒಬ್ಬ ಸುಳ್ಳಾದ ಸ್ನೇಹಿತನು ನಿಮಗೆ ಬೇಕಾದದನ್ನು ನೀಡಬಹುದು. ಆದರೆ ಅದೇ ಸ್ನೇಹಿತನು ನಿಮಗೆ ಉತ್ತಮವಾದದ್ದನ್ನು ನೀಡಲು ಸಾಧ್ಯವಿಲ್ಲ.

[11]ರಾಜಕುಮಾರಿಗೆ ಅಡಿಗೆ ಕೆಲಸ ತಿಳಿದಿತ್ತು. ಆಕೆಯ ಜೀವಿತದಲ್ಲಿ ಆಳುಗಳು ಈ ಕೆಲಸವನ್ನು ಮಾಡುತ್ತಿದ್ದರು, ಯೆಹೊದ್ಯರು ಮುಖ್ಯವಾದ ಕುಶಲತೆಗಳನ್ನು ತಮ್ಮ ಮಕ್ಕಳಿಗೆ ಹೇಳಿಕೊಟ್ಟಿದ್ದರು. [12]ತಾಮಾರಳ ಮೊದಲ ವಾಗ್ವಾದ ಬಲವಾದದ್ದಾಗಿತ್ತು: "ನೀನು ಬಯಸುತ್ತಾ ಇರುವಂಥದ್ದು" ದೇವರಿಗೂ, ಮನುಷ್ಯರಿಗೂ ವಿರೋಧವಾದದ್ದು ಇದು ನಿನ್ನನ್ನೂ ಹಾಳು ಮಾಡುತ್ತದೆ. ನನ್ನನ್ನೂ ಹಾಳುಮಾಡುತ್ತದೆ. "ಆಕೆಯ ಮೂರನೆಯ ವಾಗ್ವಾದ," ಕೊನೆಗೆ ದಾವೀದನು ಅವಳನ್ನು ಅವನಿಗೆ ಹೆಂಡತಿಯಾಗಿ ನೀಡಬಹುದು ಎಂಬ ಹೇಳಿಕೆ ಬಲವಾದದ್ದಾಗಿರಲಿಲ್ಲ, ಯಾಕೆಂದರೆ ಇಂಥ ವಿಷಯವು ಧರ್ಮಶಾಸ್ತ್ರಕ್ಕೆ ವಿರೋಧವಾಗಿತ್ತು (ಯಾಜಕಕಾಂಡ 18:9, 11; 20:17; ಧರ್ಮೋಪದೇಶಕಾಂಡ 27:22). ಕಾರಣಗಳನ್ನು ಕೇಳಿಸಿಕೊಳ್ಳದ ಮನುಷ್ಯನಿಗೆ ಮನವರಿಕೆ ಮಾಡಿಕೊಡಲು ವಾಗ್ವಾದಗಳು ಸಾಕಾಗಲಿಲ್ಲ. ಮೊದಲನೆಯ ವಾಗ್ವಾದದಲ್ಲಿ ದೇವ ಜನರು ಬೇರೆಜನರಿಗಿಂತಲೂ, ಉತ್ತಮವಾದ ನಡತೆಯನ್ನು ಹೊಂದಿದವರಾಗಿರಬೇಕು. "ಇಂಥ ಕಾರ್ಯಗಳು ಇಸ್ರಾಯೇಲ್ಯರಲ್ಲಿದ್ದವು" (13:12). ಅನ್ಯರು ಮಾತ್ರ ಅನ್ಯ ಕಾರ್ಯಗಳನ್ನು ಮಾಡುವವರಾಗಿದ್ದರು. [13]NASBಯಲ್ಲಿ "ಉದ್ದ ತೋಳಿನ ಅಂಗಿ" ಈ ಟಿಪ್ಪಣಿಯಲ್ಲಿ: *"ಬಣ್ಣದ ಅಂಗಿ"* ಅದು ಸುಂದರ ವಾದ ಕಸೂತಿಯ ಕಲೆ ಇರಬಹುದು. NIVಯಲ್ಲಿ "ಬೆಲೆಬಾಳುವ ವಸ್ತುಗಳಿಂದ ಮಾಡಿದ ಅಂಗಿ" ಎಂಬುದೆ. [14]ಆಕೆಯು ತನ್ನ ತಲೆಯ ಮೇಲೆ ಬೂದಿಯನ್ನು ಸುರಿದುಕೊಂಡಳು (2 ಸಮುವೇಲ 13:19). ಆಕೆಯು ತನ್ನ ತಲೆಯ ಮೇಲೆ ಕೈಯನ್ನು ಇಟ್ಟು ಕೊಂಡಳು (ವಚನ 19; ಯೆರೆಮೀಯ 2:37ನ್ನು ನೋಡಿರಿ) ಎರಡೂ ಸಹ ದುಖದ ಸೂಚನೆಯಾಗಿರುತ್ತದೆ. [15]ಸೆಪ್ಟಜೂಯಂಟ್ ಮತ್ತು ಇತರೆ ಮುದ್ರಣಗಳು, ಕೊನೆಯಲ್ಲಿ ಈ ರೀತಿ ಸೇರಿ ಸುತ್ತವೆ. 2 ಸಮುವೇಲ 13:21: "ಅವನು ತನ್ನ ಮಗನಾದ ಅಮ್ನೋನನ ಆತ್ಮವನ್ನು ನೋಯಿಸಲಿಲ್ಲ. ಯಾಕಂದರೆ ಅವನನ್ನು ಪ್ರೀತಿಸಿದ್ದು ಮತ್ತು ಅವನು ದಾವೀದನ ಚೊಚ್ಚಲು ಮಗನಾಗಿದ್ದನು" (NEB ನೋಡಿ). [16]ನಿಖರವಾದ ಸ್ಥಳ ತಿಳಿದಿರುವದಿಲ್ಲ ಕೆಲವರು ತಿಳಿಯುವಂತೆ ಯೆರುಸಲೇಮಿನ ಉತ್ತರಕ್ಕೆ 12 ಮೈಲುಗಳ ಅಂತರದಲ್ಲಿತ್ತು. [17]1 ಸಮುವೇಲ 25ರಲ್ಲಿ ನಾಬಾಲನ ಮತ್ತು ದಾವೀದನ ಕಥೆಯನ್ನು ನೆನಪಿಸಿಕೊಳ್ಳಿರಿ. [18]ಸೆಫ್ಟುಜೂಯಂಟ್ ಮತ್ತು ಇತರೆ ಮುದ್ರಣಗಳು ಕೊನೆಯಲ್ಲಿ ಸೇರಿಸುತ್ತವೆ: 2 ಸಮುವೇಲ 13:27: "ಅರಸರ ಔದಾರ್ಯಕ್ಕೆ ತಕ್ಕಂತೆ, ಔತಣವನ್ನು ಸಿದ್ಧಪಡಿಸಿದನು" (NEB ನೋಡಿರಿ). [19]NASBಯಲ್ಲಿ "ಬೇಡಿಕೊಂಡನು" ಟಿಪ್ಪಣಿಯಲ್ಲಿ: "ಅದನ್ನು ಮುರಿದನು" ಅಬ್ಷಾಲೋಮನು ದಾವೀದನ ಯುದ್ಧಬಲವನ್ನು ಛೇಧಿಸಿದನು. [20]ಅವರು ತಮ್ಮ ಹೇಸರಕತ್ತೆಗಳನ್ನು ಹತ್ತಿ ಓಡಿಹೋದರು. ಇದು ದಾವೀದನ ಸಾಮ್ರಾಜ್ಯದಲ್ಲಿ ಸಾಮಾನ್ಯವಾದ ಸಂಗತಿಯಾಗಿತ್ತು (2 ಸಮುವೇಲ 18:9; 1 ಅರಸು 1:33, 38, 44).

[21]2 ಸಮುವೇಲ 13:37 ಹೇಳುತ್ತದೆ, "ದಾವೀದನು ತನ್ನ ಮಗನಿಗೋಸ್ಕರ ನಿತ್ಯವೂ ದುಖ ಪಡುತ್ತಿದ್ದನು." "ಮಗನು" ಅಂದರೆ ಬಹುಶ ಅಮ್ನೋನನೋ (ವಚನ 39ರ ಕೊನೆಯಲ್ಲಿ ಟಿಪ್ಪಣಿ). [22]ಗೆಷೂರು ಇಸ್ರೇಲಿಗೂ, ಸಿರಿಯಕ್ಕು ಮಧ್ಯದಲ್ಲಿದ್ದ ರಾಜ್ಯವಾಗಿತ್ತು. ಗಿಲಿಯಾದಿನ ಉತ್ತರ ದಿಕ್ಕಿನಲ್ಲಿತ್ತು (2 ಸಮುವೇಲ 3:3; 15:8). ಹೇಗೂ ಅದು ದಾವೀದನ ಆಡಳಿತಕ್ಕೆ ಒಳಪಟ್ಟಿತ್ತು. ದಾವೀದನು ತನ್ನ ಮಗನನ್ನು ಹಿಂದಟ್ಟಿ, ಅವನನ್ನು ಕರಕೊಂಡು ಬಂದು, ಅವನಿಗೆ ಯಾವುದೇ ಕಾರ್ಯವನ್ನು ಮಾಡಲು, ದಾವೀದನಿಗೆ ಯಾವ ಅಡಚಣೆಯೂ ಇರಲಿಲ್ಲ. [23]ಈ ಮುಂದಿನ ಪಾಠದಲ್ಲಿನ ವಚನ 1ನ್ನು ಗಮನಿಸಿ. (2 ಸಮುವೇಲ 14:1). [24]ಅಬ್ಷಾಲೋಮನು ಮೂರನೆಯ ಮಗನು ಎರಡನೇ ಮಗನ ವಿಷಯವಿಲ್ಲ ಕೀಲಾಬನು (2 ಸಮುವೇಲ 3:3) ಅಥವಾ ದಾನೀಯೇಲನು (1 ಪೂರ್ವಕಾಲವೃತ್ತಾಂತ 3:1), ಅವನಿಗೆ ಕೆಡುಕು ಸಂಭವಿಸಿತು (ಮಗುವಿದ್ದಾಗಲೆ ಅಸುನೀಗಿದನು ಎಂದು) ಕೆಲವರು ಹೇಳುತ್ತಾರೆ. ಮೂರನೆಯ ಮಗನಾದ ಅಬ್ಷಾಲೋಮನು ಮಾತ್ರ ಬದುಕಿದನು. [25]ಯೋವಾಬನು ನಿಯಮ ಮೀರಿ ಈ ಕಾರ್ಯ ಮಾಡಿದನು. ಊರೀಯನ ಮರಣದ ಹೊರೆ ಯು ದಾವೀದನ ತಲೆಯ ಮೇಲೆ ಇದ್ದರೂ, ದಾವೀದನ ಒಳ್ಳೆಯ, ಪ್ರತಿಕ್ರಿಯೆ ಹೊರಹೊಮ್ಮುವ ತನಕ ಅವನು ನಿರಾಳವಾಗಿರಲಿಲ್ಲ. 2 ಸಮುವೇಲ 14:22ರಲ್ಲಿ ಅವನು ನಿರಾಳವಾದದ್ದನ್ನು ಗಮನಿಸಿ. [26]ಸ್ತ್ರೀಯು ತೆಕೋವದವಳಾಗಿದ್ದಳು. ಅದು ಬೆತ್ಲೆಹೇ ಮಿನಿಂದ ದಕ್ಷಿಣಕ್ಕೆ ಕೆಲವೇ ಮೈಲುಗಳ ಅಂತರದಲ್ಲಿತ್ತು (ಅಮೋಸ 1:1 ಗಮನಿಸಿ). [27]ನಾತಾನನ ಆ ಒಂದು ಹೆಣ್ಣು ಕುರಿಮರಿಯ ಕಥೆಗಿಂತಲೂ, ಕಥೆಯು ವಿಭಿನ್ನವಾಗಿತ್ತು. ಒಂದು ಕಡೆ "ಕಣ್ಣಿಗೆ ಪ್ರತಿಯಾಗಿ ಕಣ್ಣು" ಎಂಬ ನಿಯಮಕ್ಕೆ ಈ ಕಥೆ ಒಳಪಟ್ಟಿತು. "ಇನ್ನೊಂದೆಡೆ ಆ ಸ್ಥಳವು ಅದರ

ವಾರಸುದಾರನಿಗೆ ಸೇರಬೇಕಿತ್ತು ಎಂದು ದೇವರ ಆಶೆಯಾಗಿತ್ತು." ಕುಟುಂಬದ ಇತರೆ ಜನರು ಆಕೆಯ ಸ್ವಾಸ್ತ್ಯವನ್ನು ಕಿತ್ತುಕೊಂಡು, ನ್ಯಾಯವನ್ನು ತೃಪ್ತಿಪಡಿಸದ ಕ್ರಿಯೆಯಲ್ಲಿ ಅವರು ಆಸಕ್ತರಾಗಿ ದ್ದರು. ಆಕೆಯ ಉಳಿದ ಸಂತಾನವಾದ ಆ ಒಬ್ಬನೇ ಮಗನನ್ನು ಸಂರಕ್ಷಿಸಲು ಉದ್ದೇಶ ಅವಳದ್ದಾಗಿತ್ತು. ಆಕೆಯ ಸ್ವಸ್ತ್ಯವನ್ನು ಕಾಪಾಡಲು ಇದು ಅವಶ್ಯವಾಗಿತ್ತು. ಅದೇ ರೀತಿಯಲ್ಲಿ ದಾವೀದನು ಇಸ್ರೇಲನ್ನು ಕಾಪಾಡುವ ಮತ್ತು ಸಿಂಹಾಸನವನ್ನೆರುವ ತನ್ನ ಸಂತಾನವಾದ ಅಬ್ಷಾಲೋಮನನ್ನು ಸಂರಕ್ಷಿಸಬೇಕಿತ್ತು. 2 ಸಮುವೇಲ 14:14ರ ಕೊನೆಯಲ್ಲಿ ಆಕೆಯ ಮಾತು ತಳ್ಳಲ್ಪಟ್ಟವರನ್ನು, ತಿರಿಗಿ ತನ್ನ ಬಳಿಗೆ ಬರುವ ಹಾಗೆ ಆತನು ಕರುಣೆ ಉಳ್ಳವನಾಗಿದ್ದಾನೆ. [28]ಅಬ್ಷಾಲೋಮನು ದಾವೀದನ ಪರ್ಯಾಯ ವಿಷಯವನ್ನು ಅರ್ಥಮಾಡಿಕೊಂಡನು (2 ಸಮುವೇಲ 14:32). [29]ಸಂಯುಕ್ತ ರಾಷ್ಟ್ರದಲ್ಲಿ ಅನುಭವಿ ಆಟಗಾರರನ್ನು ಉಪಯೋಗಿಸದೆ ಹೋದರೆ ಅವರು "ಆಟಕ್ಕಾಗಲೀ ಅಥವಾ ವ್ಯವಹಾರಕ್ಕಾಗಲಿ!" ನಮ್ಮನ್ನು ಉಪಯೋಗಿಸಿ ಎಂದು ಹೆದರಿಸುತ್ತಾರೆ. [30]ಯೋವಾಬನು ಈಗಾಗಲೇ ತನ್ನ ಅದೃಷ್ಟವನ್ನು ಮುಂದೂಡಿದ್ದನು ಎಂದು ತಿಳಿದಿದ್ದನು.

[31]ಮಕ್ಕಳು ಜನರ ಮನಸ್ಸನ್ನು ತಮ್ಮೆಡೆ ಗಮನವನ್ನು ಕೊಡುವಂತೆ ಕೆಟ್ಟ ಕಾರ್ಯಗಳನ್ನು ಮಾಡುವರು. ನೀವು ಸಹ ಮಾಡಿರಬಹುದು. [32]2 ಸಮುವೇಲ 15:7 "ನಾಲ್ವತ್ತುವರ್ಷ" ಎಂದು ನಮೂದಿಸಿದೆ. ಪೂರ್ವವೃತ್ತಾಂತದಲ್ಲಿ ಮತ್ತು ಜೋಸ್‌ಫಸ್ "ನಾಲ್ಕು" ಬಹುಶ ಇದೇ ಸ್ಪಷ್ಟವಾದ ದಾಖಲೆ. (NASB ಹಾಗೂ NIVಯ ಟಿಪ್ಪಣಿಯನ್ನು ನೋಡಿರಿ) ಇನ್ನೂ ಕೆಲವರು ನಾಲ್ವತ್ತು ವರ್ಷದ ಕುರಿತು ಇನ್ನೊಂದು ಅಂಶವನ್ನು ತಿಳುಕೊಂಡಿದ್ದಾರೆ. ಬಹುಶ ಅದು ಸಮುವೇಲನು ದಾವೀದನಿಗೆ, ಅಭಿಷೇಕ ಮಾಡಿ ನಾಲ್ವತ್ತು ವರ್ಷಗಳಾಗಿರಬಹುದು. [33]2 ಸಮುವೇಲ 15:6, 12. ದಾವೀದನು ದೇಶಕ್ಕಾಗಿ ಮಾಡಿದ ಕ್ರಿಯೆಗಳನ್ನು ಒಬ್ಬರು ಪರಿಗಣಿಸಿದರೆ ("ತಳಭಾಗವನ್ನು ಸೃಷ್ಟಿಸದೇ, ಮೇಲಕ್ಕೆ ಹೋಗುವದು ಹೇಗೆ" ಎಂಬ ಪಾಠವನ್ನು ನೋಡಿರಿ), ಅಬ್ಷಾಲೋಮನಿಗೆ ಇದನ್ನು ಮಾಡಲು ಸಾಧ್ಯವಾಯಿತು. ದಾವೀದನು ಬೆತ್ಷೇಬಳೊಂದಿಗೆ ಪಾಪವನ್ನು ಮಾಡಿದ ನಂತರ ಅವನು ಹಳೆಯ ದಾವೀದನಾಗಿರಲಿಲ್ಲ. [34]ದಾಖಲೆಗಳ ಪ್ರಕಾರ, ರಥಗಳನ್ನು ಕುದುರೆಗಳನ್ನು ಉಪಯೋಗಿಸಿದ ರಾಜ ಮನೆತನದವರಲ್ಲಿ ಅಬ್ಷಾಲೋಮನು ಮೊದಲಿಗನು. ಇದು ನಡೆಯುತ್ತದೆ ಎಂದು ಸಮುವೇಲ ಎಚ್ಚರಿಸಿದ್ದನು (1 ಸಮುವೇಲ 8:11). [35]2 ಸಮುವೇಲ 18:18. ಸೌಲನು ಈ ಹಿಂದೆ ಇದೇ ಕಾರ್ಯವನ್ನು ಮಾಡಿದನು (1 ಸಮುವೇಲ 15:12). "ಅರಸನು (ಕಣಿವೆ) ಎಲ್ಲಿತ್ತು" ಎಂದು ನಮಗೆ ತಿಳಿದಿರುವದಿಲ್ಲ. ಬಹುಶ ಅದು ಯೆರುಸಲೇಮಿಗೆ ಸಮೀಪದಲ್ಲಿತ್ತು. [36]ಅವನ ಹೆಸರನ್ನು ಚಿರವಾಗಿ ಉಳಿಸುವ ಉದ್ದೇಶದಿಂದ ಎಂದು ಅಬ್ಷಾಲೋಮನು ತಿಳಿಸಿದ್ದನು. ಹೇಗೂ ಅವನ ಜೀವಮಾನ ಕಾಲದಲ್ಲಿ ಇದನ್ನು ಮಾಡಿದ್ದನು. ತಕ್ಷಣದ ಪರಿಣಾಮ ಹೆಸರು ವಾಸಿಯಾಗುವದಕ್ಕೆ ಇದು ಪೂರ್ವಕಾಲದ ಪ್ರಚಾರದ ಪದ್ಧತಿಯಾಗಿತ್ತು. ವಚನಗಳು ಹೇಳುವದನ್ನು ಗಮನಿಸಿ. "ಮಗನಿಲ್ಲದ್ದರಿಂದ" (2 ಸಮುವೇಲ 18:18). (2 ಸಮುವೇಲ 14:27ರಲ್ಲಿ); ಅಬ್ಷಾಲೋಮನ ಮಕ್ಕಳ ಕುರಿತಾಗಿ ಈ ಹಿಂದೆ ತಿಳಿಸಲಾಗಿದೆ. ಸಾಧಾರಣವಾಗಿ ಹೆರಿಗೆ ಸಮಯದಲ್ಲಿ ಅಥವಾ ಹುಟ್ಟಿದ ಮೇಲೆ ಅಸುನೀಗಿರಬಹುದು. [37]ಅಬ್ಷಾಲೋಮನು ನಡೆಸಿದ ಕಾರ್ಯಗಳಲ್ಲಿ, ದಾವೀದನು ಕನಿಷ್ಟ ಪಕ್ಷ ಸ್ವಲ್ಪವಾಗಿ ಯಾದರೂ ತಿಳಿದುಕೊಳ್ಳಬೇಕಿತ್ತು ... ಆದರೆ ದಾವೀದನು ಪುನ ಅದರ ಬಗ್ಗೆ ಏನನ್ನೂ ಮಾಡಲಿಲ್ಲ. [38]ದೇವಾಲಯವನ್ನು ನಿರ್ಮಿಸುವದಕ್ಕಿಂತ ಮೊದಲು "ಉನ್ನತ ಪ್ರದೇಶಗಳಲ್ಲಿ" ಯಜ್ಞ ಹೋಮ ವನ್ನು ಸಮರ್ಪಿಸಬಹುದಾಗಿತ್ತು. ಅಬ್ಷಾಲೋಮನು ಹೆಬ್ರೋನಿನಲ್ಲಿ ಜನಿಸಿದ್ದರಿಂದ ಅಲ್ಲಿ ಅವನು ಹೋಗಿ ಯಜ್ಞವರ್ಪಿಸುವುದು ನಿಯಮಾನುಸಾರವಾಗಿತ್ತು. [39]ತನ್ನ ನಿಜವಾದ ಉದ್ದೇಶವನ್ನು ಮರೆ ಮಾಡಲು, ಯೋಜಿಸಿದ್ದ ಈ ಧರ್ಮನಿಷ್ಟೆ ಕಾರ್ಯವನ್ನು ಮಾಡಿದವರಲ್ಲಿ, ಅಬ್ಷಾಲೋಮನು ಮೊದಲಿನವನೂ ಅಲ್ಲ, ಕಡೆಯವನೂ ಅಲ್ಲ ಅವನು ಹೆಬ್ರೋನಿಗೆ ಬಂದಾ, ಈ ಒಳಸಂಚಿನ ಓಗಟನ್ನು ಮುಂದುವರಿಸಿದ್ದನು (2 ಸಮುವೇಲ 15:12). [40]ಅಬ್ಷಾಲೋಮನು ಈ ಹಿಂದೆಯು ಸಹ ತಾನು ಹೊರಟಿದ್ದ ಪ್ರವಾಸದ ಕುರಿತಾಗಿ ಸುಳ್ಳು ಹೇಳಿದ್ದನು (2 ಸಮುವೇಲ 13:23-27). ಆದರೆ ದಾವೀದನು ಅದನ್ನು ನೆನಪಿನಲ್ಲಿಟ್ಟರಲಿಲ್ಲ.

[41]2 ಸಮುವೇಲ 15:10 ಅದು ನೆರವೇರಬೇಕಿತ್ತು, ವಚನ 13 ಅದು ನೆರವೇರಿತು. 2 ಸಮುವೇಲ 19:10 ಅವರು "ಅಭಿಷೇಕ" ಮಾಡಿ ಅಬ್ಷಾಲೋಮನನ್ನು ಅರಸನನ್ನಾಗಿ ಮಾಡಿದರು. ಅಲ್ಲಿ ಒಂದು ವಿಧವಾದ ಸಿಂಹಾಸನವನ್ನೆರುವ ಪದ್ಧತಿಯನ್ನು ನೆರವೇರಿಸಿದರು. [42]2 ಸಮುವೇಲ 15:12 ಇದೇ ಮೊದಲ ಸಾರಿ ಅಹಿತೋಫೆಲನ ಕುರಿತು ಓದಿದ್ದೇವೆ, ಸಹಜ ವಾಗಿ ದಾವೀದನು ಅವನ ಸಲಹೆಗಳನ್ನು ಒಪ್ಪಿಕೊಂಡಿದ್ದನು (ವಚನ 31). ಅಹಿತೋಫೆಲನು ಸಹಜವಾಗಿ ಬೆತ್ಷೇಬಳ ಅಜ್ಜನಾಗಿದ್ದನು (2 ಸಮುವೇಲ 11:3; 23:34ಕ್ಕೆ ಹೋಲಿಸಿ). ಬಹುಶ ದಾವೀದನು ಬೆತ್ಷೇಬಳಿಗೂ ಊರೀಯನಿಗೂ ಮಾಡಿದ ಕಾರ್ಯದ ನಿಮಿತ್ತ ಅಹಿತೋಫೆಲನು ಅಸಮಧಾನ ಗೊಂಡಿದ್ದನು. [43]ದಾವೀದನು ಪಟ್ಟಣವನ್ನು ತೆರೆದದ್ದು, ಸೈನ್ಯದ

ಒಂದು ನಿಯಮವಾಗಿತ್ತು. ಇದರ ಕುರಿತಾಗಿ ಇನ್ನೊಂದು ಅಂಶ ದಾವೀದನು ಸಕಾರಾತ್ಮಕವಾದ ಕ್ರಿಯೆಯನ್ನು ಮಾಡದೆ, ಬೇರೆ ವಿಧದಲ್ಲಿ ಪ್ರತಿಕ್ರಿಯಿಸಿದನು. [44]"ಆಗ ಇಸ್ರಾಯೇಲ್ಯರೆಲ್ಲರೂ ದಾವೀದನನ್ನು ಬಿಟ್ಟು ... ಶೆಬನನ್ನು ಹಿಂಬಾಲಿಸಿದರು," ದಾವೀದನು ಮಾತ್ರ ಪಟ್ಟಣವನ್ನು ಬಿಟ್ಟು ಹೋಗಲಿಲ್ಲ (2 ಸಮುವೇಲ 20:2). [45]"ಈ ಮಾತುಗಳ ಹಿಂದೆ ಇರುವ ಯೋಚನೆ ನಿನ್ನ ಈ ಕಾರ್ಯದ ನಿಮಿತ್ತ ನೀನು ನಿನ್ನ ತಂದೆಗೆ ಅಸಹ್ಯವಾದಿ ಎಂದು ತಿಳಿಯುವರು." ಇನ್ನು ಕೆಲವರು ಅಬ್ಷಾಲೋಮನು, ತನ್ನ ತಂದೆಯೊಂದಿಗೆ ಪುನ ಸಂಧಾನ ಮಾಡಿ ಕೊಳ್ಳುವನು ಎಂದು ಭಯಪಟ್ಟರು. ಯಾಕೆಂದರೆ ಅಬ್ಷಾಲೋಮನೊಂದಿಗೆ ಅವನ ತಂದೆಗೆ ವಿರುದ್ಧವಾದ ದಂಗೆಯಲ್ಲಿ ಅವರ ಪಾಲು ಇದ್ದದ್ದರಿಂದ ಅವನು ಇವರನ್ನು ಶಿಕ್ಷೆಗೆ ಒಳಪಡಿಸುವನು ಎಂದು ಭಯಪಟ್ಟರು. [46]ಅಬ್ಷಾಲೋಮನ ಈ ಕೃತ್ಯಗಳ ನಿವಾರಣೆಗೆ, ರಾಜಕೀಯ ನಿಯಮಗಳಿದ್ದವು. ಆದರೆ ಅವನ ಕ್ರಿಯೆಗಳು ಧರ್ಮಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿದ್ದವು (ಯಾಜಕಕಾಂಡ 18:7, 8; 20:11). [47]ನಂತರ ಇನ್ನೊಬ್ಬ ಮಗನು ದಂಗೆ ಎದ್ದನು, ಆದರೆ ಈ ಸಮಯದಲ್ಲಿ, ದಂಗೆ ಏಳಲಿಲ್ಲ. [48]"ಎಫ್ರಾಯೀಮಿನ ಅರಣ್ಯ"ದ ಕುರಿತು ಟಿಪ್ಪಣಿಯನ್ನು ನೋಡಿರಿ. "ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸುವದು" ಈ ಪುಸ್ತಕದ ಮುಂದಿನ ಭಾಗದಲ್ಲಿ ನೋಡಿ. [49]ಅಬ್ಷಾಲೋಮನ ಕೂದಲು ಯಾವ ರೀತಿಯಲ್ಲಿ ಮರದ ಕೊಂಬೆಗಳಲ್ಲಿ ಸಿಲುಕಿತು ಎಂದು ಜೋಸಿಫಸ್ ತನ್ನ ಅಧ್ಯಾಯದಲ್ಲಿ ಬರೆದಿದ್ದಾನೆ. [50]ಅವನ ತಲೆಯು ಯಾವಾಗ ಕೊಂಬೆಗಳ ಕವೆಯಲ್ಲಿ ಸಿಲುಕಿಕೊಂಡಿತ್ತೋ, ಆಗ ಅವನು ಸ್ಥಿತಿ ಕಳಕೊಂಡನು. ಆದುದರಿಂದ ಬಿಡಿಸಿಕೊಳ್ಳಲು ಪ್ರಯತ್ನ ಮಾಡಲಿಲ್ಲ.

[51]"ಹೃದಯ" (2 ಸಮುವೇಲ 18:14) ಮಾಂಸ ಖಂಡವನ್ನುಹೊಂದಿ, ರಕ್ತವನ್ನು ಸರಬರಾಜು ಮಾಡುವ ಹೃದಯದ ಕುರಿತಾಗಿರುವದಿಲ್ಲ, ಆದರೆ ಅಬ್ಷಾಲೋಮನ ದೇಹದ "ಮಧ್ಯಭಾಗ," ಅಪರಾಧಿಯ ಹೊಟ್ಟೆಗೆ ಕತ್ತಿಯಿಂದ ಹಿರಿದ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ. [52]ನಿಮ್ಮ ಎರಡೂ ಬದಿಯಲ್ಲಿ ಅಬ್ಷಾಲೋಮನು ಮತ್ತು ದಾವೀದನೂ ನಿಂತುಕೊಂಡು, ಕೈ ಗಳನ್ನು ಬೀಸುವಂಥ ಸೂಚನೆಯನ್ನು ನೀಡಿ.

---

## ದಾವೀದನ ಮಗು ಅಸುನೀಗಿದಾಗ
## (2 ಸಮುವೇಲ 12:15-24)

ದಾವೀದನು ಬೆತ್ಷೆಬಳೊಂದಿಗೆ, ಪಾಪ ಮಾಡಿದ ನಂತರ ನಾತಾನನು ಅವನಿಗೆ "ನೀನು ಸಾಯುವದಿಲ್ಲ; ಆದರೂ ನೀನು ಈ ಕೃತ್ಯದಿಂದ ಯೆಹೋವನು ವೈರಿಗಳು ಆತನನ್ನು ಬಹಳವಾಗಿ ನಿಂದಿಸುವದಕ್ಕೆ ಆಸ್ಪದ ಕೊಟ್ಟದ್ದರಿಂದ ನಿನ್ನಿಂದ ಹುಟ್ಟಿರುವ ಮಗುವು ಸತ್ತೇಹೋಗುವುದು ಎಂದು ಹೇಳಿದನು"[1] (2 ಸಮುವೇಲ 12:13, 14). ನಾತಾನನು ಹೊರಟು ಹೋದ ತಕ್ಷಣ ಶಿಶು ವಿಹಾರದಿಂದ ಒಂದು ಮಗುವಿನ,[2] ಅಕ್ರಂದನ ಕೇಳಿಸಿತು. ಆ ಅಕ್ರಂದನವು ದಾವೀದನು ಪ್ರತೀ ಮೂಳೆಗಳನ್ನು ತಣ್ಣಗಾಗಿಸಿತ್ತು. "ಊರೀಯನ ಹೆಂಡತಿಯಲ್ಲಿ ದಾವೀದನಿಗೆ ಹುಟ್ಟಿದ ಮಗುವು ಯೆಹೋವನ ಪೆಟ್ಟಿನಿಂದ[3] ಬಹುವಾಗಿ ಅಸ್ವಸ್ಥವಾಯಿತು" (ವಚನ 15).

ಮಕ್ಕಳು ಅಸ್ವಸ್ಥರಾಗುತ್ತಾರೆ; ಅವರು ಸಾಯುವುದು ಸಹಜ. ಈ ಸತ್ಯವನ್ನು ಯೋಚಿಸುವುದೂ ಇಲ್ಲ; ಆ ಘಟನೆಯನ್ನು ಎದುರಿಸಲೂ ಇಷ್ಟಪಡುವದಿಲ್ಲ. ಆದರೆ ಅದು ಕಡುಸತ್ಯವೆ ಸ್ಮಶಾನದಲ್ಲಿ ಕೆಲವು ಸಮಾದಿಗಳು ಕೆಲವೇ ಅಡಿಗಳ ಉದ್ದವಿರುತ್ತವೆ. ಹುಟ್ಟುವಾಗಲೇ ಮರಣ ಹೊಂದಿದ ಮಕ್ಕಳ ಸಮಾದಿಯ ಮುಂದೇ ಪ್ರಸಂಗ ಮಾಡಿದ್ದೇನೆ. ಕೆಲವು ಸಾರಿ ಮರಣವು (ಇಬ್ರಿಯ 9:27) ತಡವಾಗಿ ಬರುವ ಬದಲು ಬೇಗನೆ ಬರುತ್ತದೆ.

### ಆನಾರೋಗ್ಯದ ನಿಮಿತ್ತ ಮಗು ಸಾಯುವಾಗ, ಅದಕ್ಕೆ ಒಂದು ಕಾರಣವಿರಬೇಕು

ನಿಶ್ಚಯವಾಗಿ ಇದರಲ್ಲಿ ದೇವರ ಯಾವ ಉದ್ದೇಶವನ್ನು; ತಿಳುಕೊಳ್ಳಲು ಸಾಧ್ಯವಿಲ್ಲ, "ಪರದೈಸನ್ನು ಸುಂದರ ಪಡಿಸುವ ಕಾರಣದಿಂದ ದೇವರು ನಿಮ್ಮ ಮಗುವನ್ನು ಕರೆದು ಕೊಂಡಿರಬಹುದು." ಕೆಲವು ಸಾರಿ ಮಗುವಿನ ಮರಣ ಯಾವ ಅರ್ಥವನ್ನು ನೀಡುವದಿಲ್ಲ. ಅದರ ಪರಿಣಾಮ ಮಾತ್ರ ಪಾಪ ಅಸ್ವಸ್ಥತೆಯ ಪ್ರಪಂಚದಲ್ಲಿ ಜೀವಿಸುವಂತೆ. ಆದರೆ ನಮ್ಮ

ಅಧ್ಯಯನದಲ್ಲಿ ಕೆಲವು ಸಾರಿ ಕಾರಣಗಳನ್ನು ತಿಳಿಯಲು ಸಾಧ್ಯವಿದೆ ಇದು ಯಾವಾಗಲೂ ನಮಗೆ ಅರ್ಥವಾಗದೆ ಇರಬಹುದು, ಆದರೆ ದೇವರಲ್ಲಿ ಕಾರಣವಿದೆ.

ಕೆಲವು ಸಾರಿ ದಾವೀದನ ಜೀವಿತದಲ್ಲಿದ್ದಂತೆ, ತಂದೆ ತಾಯಿಗಳ ಪಾಪವೇ ಅದಕ್ಕೆ ಕಾರಣವಿರಬಹುದು. ಅದು ನ್ಯಾಯಬದ್ಧವಿಲ್ಲದಿದ್ದರೂ ಜೀವನದ ಕಾರ್ಯವಾಗಿರುತ್ತದೆ. ಇತರರ ಪಾಪದ ನಿಮಿತ್ತ ಮುಗ್ದರು ಶಿಕ್ಷೆ ಹೊಂದುತ್ತಾರೆ ಎಂದು ನೆನಪುಮಾಡಿಕೊಳ್ಳೋಣ. ಮಕ್ಕಳು ಹುಟ್ಟುವಾಗಲೇ ಏಡ್ಸ್‌ನಿಂದಲೂ ಕುಡಿತದ ದೃವದಿಂದಲೂ ಮಾದಕ ವಸ್ತುಗಳ ಪರಿಣಾಮದಿಂದಲೂ ಇರಬಹುದು ಯಾಕೆಂದರೆ ಅದಕ್ಕೆ ಕಾರಣ ತಂದೆ ತಾಯಿಗಳೇ ಪ್ರಶ್ನೆಗಳಿಂದ ನಿಮ್ಮನ್ನು ನೀವು ಚೇದಿಸಿಕೊಳ್ಳಬೇಡಿರಿ. “ನನ್ನ ಮಗುವಿನ ಮರಣದ ಮೂಲಕ ಯಾಕೆ ದೇವರು ನನ್ನನ್ನು ಶಿಕ್ಷಿಸುತ್ತಿದ್ದಾನೆ?” ಆ ಪ್ರಶ್ನೆಗಳು ಬೆಲೆ ಇಲ್ಲದವುಗಳಾಗಿದೆ ಕೆಲವು ಸಾರಿ ಇದು ಸತ್ಯವಾಗಿರುವದರಿಂದ ಇದು ಸಾಧ್ಯವಾಗುತ್ತದೆ.

ಕೆಲವು ಸಾರಿ ಮಗುವಿನ ಮರಣ ಮಗುವಿಗೇ ಆಶೀರ್ವಾದವಾಗಿರುತ್ತದೆ. ಒಂದು ವೇಳೆ ಅದು ಬದುಕಿದ್ದರೆ ಅದು ಅಪಾಯಕರ ನ್ಯೂನತೆಗಳಿಂದ ಹಿಂಸೆಗೆ ಒಳಗಾಗುತ್ತಿತ್ತು. ದೇವರೆ ದಾವೀದನ ಮಗುವಿನ ಮರಣವನ್ನು ಅನುಮೋದಿಸಿದನು ಯಾಕೆಂದರೆ ಅದು ದಾವೀದನ ಪಾಪದ ನಿಮಿತ್ತ ಜನಿಸಿದ, ಮಗುವಾಗಿದ್ದರಿಂದ ಇದು “ಪಾಪದ ಮಗು” ಎಂದು ಕರೆಯಲ್ಪಡುತ್ತಿತ್ತು. ಅದು ನ್ಯಾಯಬದ್ಧವಾಗಿ ಹುಟ್ಟಿದ ಮಗುವಲ್ಲ ಅದು ಹಾದರದ ಮಗು ಎಂದು ಕರೆಯಲ್ಪಡುತ್ತಿತ್ತು. ಒಂದು ವೇಳೆ ಇದು ದೇವರ ಯೋಚನೆಯ ಒಂದು ಭಾಗವಾಗಲೂ ಸಾಧ್ಯವಿತ್ತು, ಸಾಧ್ಯವಿಲ್ಲದೆಯೂ ಇತ್ತು. ನಾವು ದೇವರ ಮನಸ್ಸನ್ನು ಅರ್ಥೈಸುವುದು ಕಷ್ಟವಾಗುತ್ತದೆ (ಯೆಶಾಯ 55:8, 9) - ಆದರೆ ಕೆಲವು ಸಾರಿ ಅಸುಗೂಸಿನ ಮರಣ “ಉತ್ತಮವೇ.”

### ಅಸ್ವಸ್ಥವಾದ ಮಗುವಿಗಾಗಿ ಮನ ಪೂರ್ವಕವಾಗಿ ನಾವು ಪ್ರಾರ್ಥಿಸಬೇಕು

ಮಗನು ಅಸ್ವಸ್ಥನಾದಾಗ ...

> ಆದದರಿಂದ ದಾವೀದನು ಮಗುವಿಗೋಸ್ಕರ ದೇವರನ್ನು ಪ್ರಾರ್ಥಿಸುತ್ತಾ ಉಪವಾಸ ಮಾಡುತ್ತಾ ಒಳಕೋಣೆಯಲ್ಲಿ ನೆಲದ ಮೇಲೆಯೇ ಬಿದ್ದುಕೊಂಡು ರಾತ್ರಿ ಕಳೆಯುತ್ತಿದ್ದನು. ಅವನ ಮನೆಯ ಹಿರೀಸೇವಕರು ಅವನನ್ನು ಎಬ್ಬಿಸುವದಕ್ಕೆ ಹೋದರು ಆದರೆ ಅವನು ಏಳಲೂ ಇಲ್ಲ, ಅವರೊಡನೆ ಆಹಾರ ತೆಗೆದುಕೊಳ್ಳಲೂ ಇಲ್ಲ (12:16, 17).

ಏಳು ದಿನಗಳು ಹಾಗೂ ರಾತ್ರಿಗಳು ದಾವೀದನು ತನ್ನ ಹೃದಯವನ್ನು ದೇವರ ಮುಂದೆ ಸುರಿದನು. ಮಗುವನ್ನು ಹುಳಿಸಲು ಉಪವಾಸವಿದ್ದು ದೇವರಲ್ಲಿ ಬೇಡಿಕೊಂಡನು. ನಿನಗೆ ಹುಟ್ಟುವ ಮಗುವು ಸತ್ತೇ ಸಾಯುವುದು ಎಂದು ದೇವರು ತಿಳಿಸಿದ್ದರೂ ಸಹ ದಾವೀದನು ಯಾಕೆ ಮೊರೆಯಿಟ್ಟನು. ಯಾಕೆಂದರೆ ದೇವರು ಕೃಪೆಯನ್ನು ತೋರಿಸ ಬಹುದು ಎಂದು ನಂಬಿದ್ದನು (12:22). ಮತ್ತು ಪಾಪದ ಸಂಭಳ ಮರಣವಾಗಿತ್ತು ಆ ಮರಣದಿಂದ ದಾವೀದನು ಬದುಕಿ ಉಳಿದಿದ್ದನು, “ನೀನು ಹೇಗೂ ಸಾಯುವದಿಲ್ಲ” (12:13).

ಮಗುವಿಗೆ ಏನೇ ಸಂಭವಿಸಬಹುದು ಪರಿಸ್ಥಿತಿಯು ಭಯಾನಕವಾಗಿರಬಹುದು ಏನೇ ಇದ್ದರೂ ಪ್ರಾರ್ಥನೆಯೇ ಅದಕ್ಕೆ ಉತ್ತರ ನಮ್ಮ ದೇವರು ಕೃಪಾಪೂರ್ಣನಾಗಿದ್ದಾನೆ (12:22).

### ಮಗು ಅಸುನೀಗುವಾಗ ನಮ್ಮ ಜೀವಿತದ ತುಣುಕುಗಳನ್ನು ಆರಿಸಿಕೊಂಡು ಮುಂದೆ ಸಾಗುತ್ತಿರಬೇಕು

ದೇವರು ಯಾವಾಗಲೂ ತನ್ನ ಮಕ್ಕಳ ಪ್ರಾರ್ಥನೆಗೆ ಸದುತ್ತರ ನೀಡುತ್ತಾನೆ. ಕೆಲವು

ಸಾರಿ "ಇಲ್ಲ" ಎಂಬುವುದೇ ಉತ್ತರವಾಗಿರುತ್ತದೆ. ಈ ಪಾಠವನ್ನು ಕಲಿಯಲು ಕಠಿಣವಾಗಿ ರುತ್ತದೆ. ಆದರೆ ನಾವು ಕಲಿಯಲೇಬೇಕು. ದಾವೀದನು ಏಳುದಿನಗಳು ಎಡಬಿಡದೆ ಕಠಿಣ ವಾಗಿ ಪ್ರಾರ್ಥಿಸಿದರೂ ಸಹ ಮಗು ಅಸುನೀಗಿತು. ಆ ಮರಣದ ವರ್ತಮಾನವನ್ನು ದಾವೀದ ನಿಗೆ ತಿಳಿಸಲು ಅವನ ಸೇವಕರು ಭಯಗೊಂಡರು. ಅವರು - "ಮಗು ಬದುಕಿರವಾಗಲೇ ನಾವು ಅವನೊಂದಿಗೆ ಮಾತನಾಡಿದಾಗ ಅವನು ನಮ್ಮ ಸ್ವರವನ್ನು ಕೇಳಿಸಿ ಕೊಳ್ಳಲಿಲ್ಲ. ಹೀಗಿರುವದಲ್ಲಿ ಮಗುವಿನ ಮರಣವಾರ್ತೆಯನ್ನು ಅವನಿಗೆ ತಿಳಿಸಿದರೆ ಅವನು ತನಗೆ ಏನಾದರು ಕೇಡು ಮಾಡಿಕೊಂಡ ನಲ್ಲವೆ ಎಂದು ಮಾತಾಡಿಕೊಳ್ಳುತ್ತಿದ್ದರು!" (12:18).

ಸೇವಕರು ಈ ಪ್ರಕಾರ ಗುಜು ಗುಜು ಮಾತಾಡುವದನ್ನು ದಾವೀದನು ಕಂಡು ಮಗು ಮೃತಿಹೊಂದಿತೆಂದು ತಿಳಿದು ಸೇವಕರನ್ನು - ಮಗುವು ಸತ್ತಿತೋ ಎಂದು ಕೇಳಿದನು ಅವರು - ಹೌದು ಸತ್ತಿತು ಎಂದು ಉತ್ತರಕೊಟ್ಟರು. "ಆಗ ದಾವೀದನು ನೆಲದಿಂದೆದ್ದು ಸ್ನಾನಮಾಡಿ ತೈಲ ಹಚ್ಚಿಕೊಂಡು ತನ್ನ ಬಟ್ಟೆಗಳನ್ನು ಬದಲಿಸಿ ಯೆಹೋವನ ಮಂದಿರಕ್ಕೆ ಹೋಗಿ ಆರಾ ಧನೆಮಾಡಿದನು ಅನಂತರ ಮನೆಗೆ ಬಂದು ಆಹಾರತರಿಸಿ ಊಟಮಾಡಿದನು" (12:20). ನಾವು ಈ ದಿನ "ಅವನು ಮೊಣಕಾಲಿನಿಂದ ಎದ್ದು ಸ್ನಾನಮಾಡಿ ಬಟ್ಟೆಗಳನ್ನು ಬದಲಾಯಿಸಿ ಮುಂಜಾನೆಯ ಉಪಹಾರವನ್ನು ತೆಗೆದುಕೊಂಡನು. ಮತ್ತು ಕಚೇರಿಗೆ ಹೋದನು ಎಂದು ಹೇಳು ತ್ತೇವೆ." ದಾವೀದನು ಅವನನ್ನು ಹಿಂದಕ್ಕೆ ತರುವುದು ನನ್ನಿಂದಾಗೀತೆ? ಅಂದನು (ವಚನ 23). ಉದ್ದವಾದಂಥ ದುಖವು ಅವನ ಮಗನಿಗೆ ಸಹಾಯವಾಗಲಿಲ್ಲ; ಅದು ದಾವೀದನ ಹೃದಯವನ್ನು ನೊಂದಿಸಿತ್ತು ಎಂಥಹ ತೊಂದರೆ ಬಂದರೂ ದಾವೀದನು ತನ್ನ ಜೀವಿತದಲ್ಲಿ ಮುಂದೆ ಹೋದನು.

## ಮಗುವು ಮೃತಿಹೊಂದುವಾಗ ಪರಲೋಕದಲ್ಲಿ ಅವರನ್ನು ಪುನ ಸಂಧಿಸುವದಕ್ಕೆ ಸಿದ್ಧರಾಗಬೇಕು

ಇದನ್ನು ನೋಡಿ ಅವನ ಸೇವಕರು "ಇದೇನು ನೀನು ಮಾಡಿದ್ದು? ಹುಡುಗನು ಜೀವದಿಂದಿದ್ದಾಗ ಅಳುತ್ತಾ ಉಪವಾಸವಾಗಿದ್ದಿ; ಹುಡುಗನು ಸತ್ತಾನಂತರ ಎದ್ದು ಊಟಮಾಡಿದಿ ಅಂದರು" (12:21). ಅವನ ಉತ್ತರವು ಪರಿಣತ ಕೃತಿಯಂತಿತ್ತು:

> ದಾವೀದನು ಅವರಿಗೆ - ಹುಡುಗನು ಜೀವದಿಂದಿದ್ದಾಗ ಒಂದು ವೇಳೆ ಯೆಹೋವನು ಕೃಪೆಮಾಡಿ ಅವನನ್ನು ಉಳಿಸಾನು ಅಂದುಕೊಂಡು ಉಪವಾಸ ಮಾಡಿದೆನು, ಅತ್ತೆನು ಈಗ ಸತ್ತಿದ್ದಾನಲ್ಲಾ ನಾನೇಕೆ ಉಪವಾಸಮಾಡಬೇಕು? ಅವನನ್ನು ಹಿಂದಕ್ಕೆ ತರುವದು ನನ್ನಿಂದಾದೀತೇ? ನಾನಾಗಿ ಅವನ ಬಳಿಗೆ ಹೋಗಬೇಕೇ ಹೊರತು ಅವನು ನನ್ನ ಬಳಿಗೆ ಬರುವದಿಲ್ಲ ಎಂದು ಉತ್ತರ ಕೊಟ್ಟನು (12:22, 23).

ಸತ್ಯವೇದದಲ್ಲಿ ಮೃತವಾಗಿರುವ ಮಗುವಿನ ವಿಷಯದಲ್ಲಿ ಸ್ಪಷ್ಟವಾದ ಬೋಧನೆ ಗಳಿವೆ ಮಗು ಮೃತವಾಗುವಾಗ ಅದು ಪರಲೋಕಕ್ಕೆ ಹೋಗುತ್ತದೆ (ಮತ್ತಾಯ 18:3; 19:14). ಯಾವ ಮಗುವನ್ನು ತಂದೆ ತಾಯಿಗಳು ಭೂಮಿಯಲ್ಲಿ ಕಳಕೊಂಡಿದ್ದರೋ ಆ ಮಗುವನ್ನು ಪುನ ಎತ್ತಿ ಮುದ್ದಾಡುವ ಸಂಧರ್ಭವನ್ನು ಊಹಿಸುವುದು ಅದ್ಭುತವಲ್ಲವೇ?[5] ನಾನು ನನ್ನ ಮಗುವನ್ನು ಪುನ "ಸಂಧಿಸಬೇಕಾದರೆ" ನಾನು ಪರಲೋಕಕ್ಕೆ ಹೋಗಬೇಕು ನಾನು ಸಿದ್ಧನಾಗಿದ್ದೇನೋ? ನಾನು ಸಿದ್ಧನಾಗಿರುವೆನೋ?

ದಾವೀದನು - "ನಾನು ಅವನನ್ನು ಹಿಂದಕ್ಕೆ ತರಲು ಸಾಧ್ಯವಿಲ್ಲ ಆದರೆ ಇದನ್ನು ನಾನು ಮಾಡುತ್ತೇನೆ. ನಾನು ಅವನ ಬಳಿಹೋಗಲು ಸಾಧ್ಯವಿದೆ."[6] ಮಕ್ಕಳನ್ನು ಕಳಕೊಂಡಿರುವ ತಂದೆ ತಾಯಿಗಳಿಗೆ ಇದು ಶ್ರೇಷ್ಠವಾದ ನಿರೀಕ್ಷೆಯಾಗಿರಲೀ ಎಂಬದೇ ನನ್ನ ಪ್ರಾರ್ಥನೆ.

## ಮಗುವು ಮೃತಿಹೊಂದುವಾಗ ಎಲ್ಲವನ್ನು ದೇವರ ಹಸ್ತಗಳಿಗೆ ಒಪ್ಪಿಸಿಕೊಡಬೇಕು

ದಾವೀದನು ಸಿಟ್ಟುಗೊಂಡು ಕಹಿಭಾವನೆಯಲ್ಲಿರಬಹುದಿತ್ತು. ಅವನು ದೇವರನ್ನು ನಿಂದಿಸಬಹುದಿತ್ತು. ದೇವರೊಂದಿಗೆ[7] ವಾಗ್ವಾದ ಮಾಡ ಬಹುದಿತ್ತು ಆದರೆ "ಅವನು ಯೆಹೋವನ ಮಂದಿರಕ್ಕೆ ಹೋಗಿ ಆರಾಧಿಸಿದನು" (12:20). ದೇವರು ನಮ್ಮನ್ನು ಅಚ್ಚುಕಟ್ಟಾಗಿಡಲು ಸಹಾಯಿಸುತ್ತಾನೆ.

ದೇವರ ಮನಸ್ಸನ್ನು ನಾವು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂದು ಈ ಹಿಂದೆ ಗಮನಿಸಿದ್ದೇವೆ. ದೇವರು ನಮಗಾಗಿ ಇಟ್ಟಿರುವಂಥ ಅದ್ಭುತಗಳನ್ನು ನಾವು ಈಗ ತಿಳಿಯಲು ಸಾಧ್ಯವಿಲ್ಲ ದಾವೀದನ ವಿಷಯದಲ್ಲಿ - ದೇವರು ದಾವೀದನಿಗೆ ಇನ್ನೊಬ್ಬ ಮಗನನ್ನು ಅನುಗ್ರಹಿಸಿದನು - ಆ ಅದ್ಬುತವಾದ ಮಗನ ಹೆಸರು ಸೊಲೊಮೋನನು.

> ದಾವೀದನು ತನ್ನ ಹೆಂಡತಿಯಾದ ಬೆತ್ಷೆಬೆಯ ಬಳಿಗೆ ಹೋಗಿ ಆಕೆಯನ್ನು ಸಂತೈಸಿ ಆಕೆಯ ಸಂಗಡ ಮಲಗಿದನು ಆಕೆ ಮಗನನ್ನು ಹೆತ್ತಾಗ ಅವನಿಗೆ ಸೊಲೊಮೋನನೆಂದು ಹೆಸರಿಟ್ಟನು. ಯೆಹೋವನು ಹುಡುಗನನ್ನು ಪ್ರೀತಿ ಸಿದನು ಪ್ರಾವಾದಿಯಾದ ನಾತಾನನು ಯೆಹೋವನು ತನಗೆ ಆಜ್ಞಾಪಿಸಿದಂತೆ ಆತನಿಗೋಸ್ಕರವಾಗಿ ಆ ಹುಡುಗನಿಗೆ ಯೆದೀದ್ಯನು ಎಂದು ಹೆಸರಿಟ್ಟನು (12:24, 25).

ಒಂದು ವೇಳೆ ನಿಮಗೂ ಇನ್ನೊಂದು ಮಗು ದೊರೆಯಬಹುದು ಒಂದು ವೇಳೆ ಇಲ್ಲದೆ ಇರಬಹುದು ಏನೇ ಸಂಭವಿಸಿದರೂ ದೇವರ ಅನ್ಯೋನ್ಯತೆಯಲ್ಲಿ ನಿಕಟವಾಗಿರುವದು ಬಹು ಪ್ರಾಮುಖ್ಯವಾದದ್ದು. ನೀನು ಇದನ್ನು ಮಾಡಿದರೆ ನಿನ್ನನ್ನು ಆಶೀರ್ವದಿಸುವನು ಅದು ನಿಜವೇ.

---

ಟಿಪ್ಪಣಿಗಳು

[1]ಅವಿಶ್ವಾಸಿಗಳು ತಿಳಿದಿರುವಂತೆ ಮಗುವಿನ ಮರಣ ಉಂಟಾಯಿತು (ತಿಳಿದಿದ್ದರು) ಅದಕ್ಕೆ ಕಾರಣ ದಾವೀದನ ಪಾಪವೇ. ದಾವೀದನ ಪಾಪದ ಕೃತ್ಯವನ್ನು ದೇವರು ಸಹಿಸಲಿಲ್ಲ ಎಂಬುದಕ್ಕೆ ಇದು ತಕ್ಷಣದ ಸೂಚನೆಯಾಯಿತು. [2]ಕೆಲವರ ಲೆಕ್ಕಾಚಾರದ ಪ್ರಕಾರ ಮಗುವಿಗೆ ಮೂರು ತಿಂಗಳು ಪ್ರಾಯವಾಗಿತ್ತು. [3]ದೇವರು ಎಲ್ಲಾ ಕೊರತೆಗಳನ್ನು ನೀಗಿಸುವನು ಎಂಬುದರಲ್ಲಿ ಯಾವ ಸಂದೇಹವಿಲ್ಲ 2 ಸಮುವೇಲ 12:10-14ರ ಎಲ್ಲಾ ಪ್ರವಾದನೆಗಳು ಪಾಪ ಮಾಡಿದವರ ಜೀವಿತದಲ್ಲಿ ಕಾರ್ಯಗತವಾಗಿತ್ತು. ಉದಾಹರಣೆಗೆ ದೇವರು - "ನಾನು ನಿನ್ನ ಹೆಂಡತಿಯರನ್ನು ತೆಗೆದು ಇನ್ನೊಬ್ಬನಿಗೆ ಕೊಡುವೆನು ಅಂದನು" (ವಚನ 11). ಹೇಗೂ ದೇವರು ಇದನ್ನು ನೇರವಾಗಿ ಮಾಡಲಿಲ್ಲ; ದಾವೀದನು ಯೆರೂಸಲೇಮಿನಿಂದ ಓಡಿ ಹೋದಾಗ, ಅಬ್ಷಾಲೋಮನು ಈ ಕಾರ್ಯವನ್ನು ನಡೆಸಿದನು ದೇವರು ಭವಿಷ್ಯವನ್ನು ನೋಡಿ ಈ ಕಾರ್ಯವನ್ನು ಮಾಡುವಂತೆ ಅಬ್ಷಾಲೋಮನನ್ನು ಪ್ರೇರಿಸಿದನು. ದೇವರು ಹೇಗೆ ಮಗುವನ್ನು "ಹೊಡೆದನು" ಹೇಗೆ ಅಸ್ವಸ್ಥನಾದನು ದೇವರು ತಾನೇ ಮಡಿದನೋ? ಅಥವಾ ಸ್ವಾಭಾವಿಕವಾಗಿ ಮಕ್ಕಳಿಗೆ ತಗಲುವ ರೋಗದಿಂದ ಮಗುವು ಮಡಿಯಿತೋ? ಅದು ನಮಗೆ ತಿಳಿಯದು, ಅದು ಅಧ್ಯಾತ್ಮಿಕವಾದಂಥ, ಪಾಪದ ಶಿಕ್ಷೆ ಎಂದು ನಾವು ತಿಳಿಯುವದು. [4]ಒಂದು ವೇಳೆ ಅವನು ಮೊಣಕಾಲೂರಿದ ಸ್ಥಳ ದೇವರ ಮಂಜೂಷದ ಎದುರಿಗಿದ್ದ ಗುಡಾರವಾಗಿರಬಹುದು. [5]ಭೂಲೋಕದಲ್ಲಿದ್ದ ಸಂಭಂದವೇ ಪರಲೋಕದಲ್ಲಿರುವದಕ್ಕೆ ಸಾಧ್ಯವಿಲ್ಲ (ಮತ್ತಾಯ 22:30). ಪರಲೋಕದಲ್ಲಿ ನಾವು "ನಾವೇ" ಆಗಿರುತ್ತೇವೆ ಮತ್ತು ಎಲ್ಲರ ಪರಿಚಯವಿರುತ್ತದೆ. ನಾವು ಊಹಿಸಲಾರದಂತ ದೃಶ್ಯದಂತೆ ಇರುತ್ತದೆ ಎಂದು ನಾನು ಈಗಾಗಲೇ ಚಿತ್ರಿಸಿದ್ದೇನೆ. [6]ಕೆಲವು ಸತ್ಯವೇದದ ವಿವರಣೆಗಾರರು ಹೇಳುವಂತೆ ದಾವೀದನು - ನಾನು ಅವನನ್ನು ಸಮಾಧಿಯಿಂದ ಹಿಂತರಲು ಸಾಧ್ಯವಿಲ್ಲ "ನಾನೇ ಅವನ ಸಮಾಧಿಗೆ ಹೋಗುವೆನು ಎಂದು ಹೇಳಿದನು ಎಂಬ ವಿವರಣೆಯನ್ನು ನೀಡಿದ್ದಾರೆ." ಈ ಆಲೋಚನೆಯು ಸಂತೈಸುವಿಕೆಯನ್ನೂ ಪ್ರೋತ್ಸಾಹವನ್ನೂ ನೀಡಲಾರದು ಇದರೊಂದಿಗೆ ಮರಣದ ನಂತರದ ಜೀವಿತ ಬಗ್ಗೆ ಹೊಸ ಒಡಂಬಡಿಕೆಯಲ್ಲಿರುವ ಸತ್ಯಾಂಶಗಳನ್ನು ಧ್ಯಾನ ಮಾಡುವದು ತಪ್ಪಾಗಲಾರದು. [7]ಈ ಸ್ಥಳವು ಬಹುಶ ಮಂಜೂಷವು ಇದ್ದಂಥ ದೇವ ದರ್ಶನದ ಗುಡಾರ ದಾವೀದನು ಅದರೊಳಗೆ ಹೋದನು. ಬಹುಶ ಅದು ಗಿಬೇಯೋನಿನಲ್ಲಿದ್ದ ದೇವದರ್ಶನದ ಗುಡಾರವಾಗಿತ್ತು.